# <u>ನೆನಪಿನ ದೋಣಿಯಲೀ...</u>

***Blessed are the forgetful, for they get the better even of their blunders***
***-Eternal Sunshine of the Spotless Mind***

ಮಾಸಿದ ಕನ್ನಡಿಯ ಮುಂದೆ ಬೆತ್ತಲಾಗಿ ನಿಂತಿದ್ದರೂ, ತಾನು ಯಾರೆಂದು ಕಂಡುಕೊಳ್ಳಲಾಗದೆ ಅವಳು ಒದ್ದಾಡುತ್ತಿದ್ದಳು. ದೊಡ್ಡ ಕಣ್ಣುಗಳು, ಉದ್ದನೆಯ ಮುಖ, ತುಂಬಿದೆದೆ, ಬೆನ್ನ ತುಂಬಾ ಹರಡಿದ್ದ ಕಪ್ಪು ಗುಂಗುರು ಕೂದಲು, ಸ್ವಲ್ಪ ಕಪ್ಪು ಎನಿಸಿದರೂ, ಮೈ ಕೈ ತುಂಬಿಕೊಂಡು, ಮೊದಲ ನೋಟಕ್ಕೇ ಸೆಳೆಯುವ ತನ್ನ ಚೆಲುವು ಅವನನ್ನು ಎಂದಾದರೂ ಆಕರ್ಷಿಸಿತ್ತೇ ಎಂದು ಕನ್ನಡಿಯನ್ನು ಕೇಳಿದಳು. ನಿನಗೆ ಗೊತ್ತಿಲ್ಲದ ವಿಷಯವೇನಿದೆ ಎಂದು ಹಂಗಿಸಿದ ಕನ್ನಡಿಯನ್ನು ಉಪೇಕ್ಷಿಸಿ, ಎಡಗಡೆ ತಿರುಗಿ ನೋಡಿಕೊಂಡಳು. ಬಾಲ್ಯದಲ್ಲಿ ಅವನು ಊರ ಕೆರೆಯಲ್ಲಿ ಈಜಲು ಹೋಗಿ ಮುಳುಗುತ್ತಿದ್ದಾಗ ಹೇಗಾದರೂ ಉಳಿಸಬೇಕೆಂದು, ಈಜು ಬಾರದ ತಾನೂ ನೀರಿಗೆ ಧುಮುಕಿದಾಗ ಆದ ಗಾಯದ ಕಲೆ ಎದೆ ಮೇಲೆ ಕಂಡಿತು. ಪ್ರೀತಿಯಿಂದ ಒಂದೇ ಒಂದು ಬಾರಿ ಅವನು ಈ ಗಾಯವನ್ನು ನೇವರಿಸುವಂತಿದ್ದರೆ ಎಂದು ಉನ್ಮತ್ತಳಾದಳು. ತಕ್ಷಣ ಇಷ್ಟು ವರ್ಷಗಳಲ್ಲಿ ಎಂದೂ ಅದರ ಪ್ರಸ್ತಾಪವನ್ನೇ ಮಾಡಿಲ್ಲದ ಅವನಿಗೆ ಆ ನೆನಪೇ ಇಲ್ಲವೆನ್ನುವುದು ಅರಿವಾಗುತ್ತಿದ್ದಂತೆಯೇ ಕಹಿ ನೆನಪೊಂದು ಕನ್ನಡಿಯೊಳಗಿಂದ ಎದ್ದು ಬಂದು ಕಪಾಳಕ್ಕೆ ಬಿಗಿದು, ಅವನು ಯಾರೆಂದು ಮರೆತುಹೋಯಿತೇ ಎಂದಂತಾಯಿತು!

ಸಿಟ್ಟಿನಿಂದ, ಕನ್ನಡಿಯ ಪಕ್ಕ ಗೋಡೆಗೆ ತೂಗುಹಾಕಿದ್ದ ಅವನ ಫೋಟೋ ಅನ್ನು ಕೈಗೆತ್ತಿಕೊಂಡು ನೆಲಕ್ಕಪ್ಪಳಿಸಲು ಹೋದಳು. ಅದೇ ಸಮಯಕ್ಕೆ ಕೆಳಗಿನ ಮಾಳಿಗೆಯಿಂದ ಗೌಡರು ಕೂಗುತ್ತಿರುವುದು ಕೇಳಿದೊಡನೆ, ಬೆಚ್ಚಿ ಬಿದ್ದು ಮತ್ತೆ ಗೋಡೆಗೆ ತೂಗು ಹಾಕಿ, ನೆಲದ ಮೇಲೆ ಬಿದ್ದಿದ್ದ ಸೀರೆಯಿಂದ ಒರೆಸಿ ಓಡಿದಳು.

***

'ನಮ್ಮ ಕಂಪನಿಗೇ ದೊಡ್ಡ ಅಸೆಟ್ ನೀನು' ಎಂದೆಲ್ಲಾ ಹೊಗಳುತ್ತಿದ್ದ ತನ್ನ ಬಾಸ್ ಗೆ, 'ನನ್ನ ಪ್ರಪೋಸಲ್ ಅಪ್ರೂವ್ ಮಾಡ್ದಿದ್ರೆ ನಾನು ರಿಸೈನ್ ಮಾಡ್ಬಿಡ್ತೀನಿ' ಎಂದು ಬೆದರಿಕೆ ಹಾಕಿಬಿಟ್ಟಿದ್ದ ನಿಖಿಲ್!

ಆಗ ಅಷ್ಟೇ ತಣ್ಣಗೆ 'ನನಗೆ ನನ್ನ ಕಂಪನಿ ಅಸೆಟ್ ಗಿಂತ ಎಥಿಕ್ಸ್ ಇಂಪಾರ್ಟೆಂಟ್, ಪ್ಲೀಸ್ ಗೋ ಅಹೆಡ್' ಎಂದು ಬಾಸ್ ಹೇಳಿಬಿಟ್ಟಿದ್ದನ್ನು ಆರು ತಿಂಗಳುಗಳಾದರೂ ಅರಗಿಸಿಕೊಳ್ಳಲಾರದೆ ನಿಖಿಲ್ ಒದ್ದಾಡುತ್ತಿದ್ದ. ಬಯೋ ಟೆಕ್ನಲಾಜಿಗೆ ಸಂಬಂಧಿಸಿದ ಸಂಶೋಧನೆಯಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದ್ದ ಬೆಂಗಳೂರಿನ 'ನ್ಯೂರಾಲಜಿಕ್ ಸೊಲ್ಯೂಷನ್ಸ್' ಕಂಪನಿಯಲ್ಲಿ ನಿಖಿಲ್ ಕಳೆದ ಹದಿನೈದು ವರ್ಷಗಳಿಂದ ಕೆಲಸ ಮಾಡುತ್ತಿದ್ದನು. ಶ್ರದ್ದೆಯಿಂದ ಕೆಲಸ ಮಾಡುವವನು, ಬಹಳ ಬುದ್ಧಿವಂತ ಎಂದೇ ಹೆಸರಾಗಿದ್ದ ನಿಖಿಲ್ ಇದಕ್ಕೆ ಮುಂಚೆ ಎಂದೂ

ಯಾವ ವಿಷಯದಲ್ಲೂ ಬಾಸ್ ನೊಂದಿಗೆ ಮನಸ್ತಾಪ ಮಾಡಿಕೊಂಡಿರಲಿಲ್ಲ. ಹೀಗೆ ಸಣ್ಣ ವಿಷಯಕ್ಕೆ ಜಗಳವಾಡಿಕೊಂಡು, ಇದ್ದಕ್ಕಿದ್ದಂತೆ ರಾಜೀನಾಮೆ ಕೊಟ್ಟ ನಿಖಿಲ್ ನನ್ನು ಎಲ್ಲರಿಗಿಂತ ಹೆಚ್ಚು ಮಿಸ್ ಮಾಡಿಕೊಳ್ಳುತ್ತಿದ್ದ ಅವನ ಸಹೋದ್ಯೋಗಿಯಾಗಿದ್ದ ಪ್ರಣವ್ ಪದೇ ಪದೇ ಫೋನ್ ಮಾಡಿ, ಕಾಡಿ, ಬೇಡಿ, ಒಂದು ಸಲವಾದರೂ ಭೇಟಿಯಾಗಲೇಬೇಕೆಂದು ಒಪ್ಪಿಸಿದ್ದ.

ತಾವಿಬ್ಬರೂ ಭೇಟಿಯಾಗುವುದನ್ನು ಯಾರೂ ನೋಡಬಾರದೆಂದೇ ಹೆಚ್ಚು ಜನರಿಲ್ಲದ ಕಾಫಿ ಶಾಪ್ ಒಂದರಲ್ಲಿ ಸಿಗೋಣವೆಂದು ಪ್ರಣವ್ ಹೇಳಿದ್ದ. ಯಾವಾಗಲೂ ಬಿಸಿ ಕಾಫಿಯನ್ನು ಕೊಟ್ಟ ಮರುಕ್ಷಣವೇ ಕುಡಿದು ಬಿಡುತ್ತಿದ್ದ ನಿಖಿಲ್ ಇಂದು ಎದುರಿಗಿದ್ದ ಕಾಫಿ ಕಪ್ ಅನ್ನೇ ದುರುಗುಟ್ಟಿಕೊಂಡು ನೋಡುತ್ತಾ ಕುಳಿತಿದ್ದುದ್ದನ್ನು ಪ್ರಣವ್ ಗಮನಿಸಿದ. ತಾವಿಬ್ಬರೂ ಒಂದೇ ವಯಸ್ಸಿನವರಾಗಿದ್ದರೂ ನಿಖಿಲ್ ತನಗಿಂತ ಬಹಳ ಚಿಕ್ಕವನಂತೆ ಕಾಣುತ್ತಾನೆಂದು ಮೊದಲೆಲ್ಲಾ ಹೊಟ್ಟೆಕಿಚ್ಚು ಪಡುತ್ತಿದ್ದ ಪ್ರಣವ್ ಕೂಡ ಅಂದು ಬೇಸರಪಟ್ಟುಕೊಳ್ಳುವಷ್ಟು ನಿಖಿಲ್ ಸೊರಗಿಬಿಟ್ಟಿದ್ದ. ನೆತ್ತಿ ಮೇಲಿನ ಕೂದಲೆಲ್ಲಾ ಉದುರಿ, ಕಣ್ಣ ಕೆಳಗೆ ಕಪ್ಪಾಗಿ, ಕೆನ್ನೆಗಳು ಜೋತುಬಿದ್ದು, ಶರೀರವೇ ಕೃಶವಾಗಿ, ಸೋತವನಂತೆ ಕಾಣುತ್ತಿದ್ದ ನಿಖಿಲ್ ನಲವತ್ತೈದು ವರ್ಷಕ್ಕಿಂತ ಹೆಚ್ಚೇ ವಯಸ್ಸಾದವನಂತೆ ದಣಿದಿದ್ದ.

"ಯಾಕೋ ಹೀಗಾಗೀದೀಯ? ಒಂದೇ ಒಂದು ಮೇಲ್ ಹಾಕೋ, ಬಾಸ್ ನಿನ್ನ ವಾಪಸ್ ಕೆಲಸಕ್ಕೆ ಸೇರಿಸ್ಕೊಳ್ತಾರೆ. ನೀನು ಮೊದಲಿನಿಂದಲೂ ಅವರ ಫೇವರಿಟ್ ಎಂಪ್ಲಾಯಿ"

"ಫೇವರಿಟ್ ಎಂಪ್ಲಾಯಿ, ಮೈ ಫುಟ್" ನಿಖಿಲ್ ಸಿಟ್ಟಿನಿಂದ ಕಾಫಿ ಕಪ್ ಅನ್ನು ದೂಡಿದನು. ಅರ್ಧಕ್ಕೆ ನಿಂತಿರುವ ಪ್ರಾಜೆಕ್ಟ್ ನಲ್ಲಿ ತನ್ನ ಮಹತ್ವವನ್ನು ಅರಿತು, ತಾನು ಮತ್ತೆ ಕೆಲಸಕ್ಕೆ ಸೇರಿಕೊಳ್ಳಲೇಬೇಕೆಂದು ಬಾಸ್ ಪ್ರಣವ್ ಮೂಲಕ ಹೇಳಿಕಳಿಸಿರಬಹುದೆಂದು ಆಶಿಸುತ್ತಿದ್ದ ನಿಖಿಲ್ ಗೆ ನಿರಾಸೆಯಾಯಿತು. "ಅಲ್ಲಿ ಎಲಾನ್ ಮಸ್ಕ್ ನ ನೋಡು, ನ್ಯೂರೋಲಿಂಕ್ ಪ್ರಾಜೆಕ್ಟ್ ನಲ್ಲಿ ಎಷ್ಟೆಲ್ಲಾ ಸಾಧಿಸಿದಾನೆ. ಇಲ್ಲಿ ನಾವಿನ್ನೂ ಮನುಷ್ಯರ ತಲೆಯಿಂದ ಬೇಡದಿರೋ ಮೆಮೋರಿಸ್ ನ ಡಿಲೀಟ್ ಮಾಡೋದರ ಬಗ್ಗೆ ಕಾನ್ಸೆಪ್ಟ್ ಕೂಡ ಪ್ರೂವ್ ಮಾಡಿಲ್ಲ. ಇದ್ರಿಂದ ಟ್ರಾಮಾದಲ್ಲಿರೋರಿಗೆ, ಡಿಪ್ರೆಶನ್ ನಲ್ಲಿರೋರಿಗೆಲ್ಲಾ ಎಷ್ಟು ಉಪಯೋಗ ಆಗುತ್ತೆ. ಸೈಕಾಲಜಿನಲ್ಲಿ ಇದೊಂದು ರೆವಲ್ಯೂಷನ್ ಆಗುತ್ತೆ. ಅದೊಂದು ಮೂವಿ ನೋಡಿದ್ವಲ್ಲೋ, ಕೇಟ್ ವಿನ್ಸ್ಲೆಟ್ ದು, ಉಮ್... ಅದೇ 'ದಿ ಎಟರ್ನಲ್ ಸನ್ ಶೈನ್ ಆಫ್ ದಿ ಸ್ಪಾಟ್ ಲೆಸ್ ಮೈಂಡ್' ಅಂತ, ಅದ್ರಲ್ಲಿ ಬ್ರೇಕ್ ಅಪ್ ಆದ್ಮೇಲೆ ಹಳೇ ಲವರ್ ನೆನಪುಗಳನ್ನು ಡಿಲೀಟ್ ಮಾಡಿಸ್ಕೊಳ್ತಾರಲ್ಲಾ, ಹಂಗೆ. ಮನುಷ್ಯರಿಗೆ ಉಪಯೋಗ ಆಗೋ ಪ್ರಾಜೆಕ್ಟ್ ಅಂದ್ಮೇಲೆ ಮನುಷ್ಯರ ಮೇಲೆ ತಾನೇ ಎಕ್ಸ್ಪಿರಿಮೆಂಟ್ ಮಾಡ್ಬೇಕು?" ನಿಖಿಲ್ ತನ್ನ ಹತಾಶೆಯನ್ನು ತೋಡಿಕೊಂಡನು.

"ಆದ್ರೆ ಮನುಷ್ಯರ ಮೇಲೆ ಎಕ್ಸ್ಪಿರಿಮೆಂಟ್ ಮಾಡೋಕೆ ಇನ್ನೂ ಹೆಲ್ತ್ ಮಿನಿಸ್ಟ್ರಿ ರೆಗ್ಯುಲೇಟರಿ

ಬಾಡೀಸ್ ಇಂದ ಅಪ್ರೂವಲ್ ಸಿಕ್ಕಿಲ್ವಲ್ಲೋ? ಯಾವುದೋ ನೆನಪು ಡಿಲೀಟ್ ಮಾಡೋಕೋಗಿ ಇನ್ಯಾವುದೋ ನೆನಪು ಡಿಲೀಟ್ ಆಗಿ ಎಡವಟ್ಟಾದರೆ ಅಂತ ಅವ್ರಿಗೆ ಹೆದ್ರಿಕೆ"

"ನೋಡೋ ಈ ರೀತಿ ಏನಾದ್ರೂ ಸಾಧಿಸಬೇಕು ಅಂದಾಗ, ಕೆಲವೊಂದು ಕೊಲ್ಯಾಟರಲ್ ಡ್ಯಾಮೇಜ್ ಇದ್ದೇ ಇರುತ್ತೆ, ರಿಸ್ಕ್ ತಗೋ ಬೇಕಾಗುತ್ತೆ ಅಂತ ಅವ್ರೇ ತಾನೇ ಹೇಳ್ತಿದ್ದಿದ್ದು?"

"ಐ ಯಾಮ್ ವಿದ್ ಯು ಆನ್ ದಟ್. ಬಟ್ ನಿಂಗೊತ್ತು ಅವ್ರು ಹೆಂಗೆ ಅಂತ. ಅವ್ರು ಒಪ್ಪದೇ ಇದ್ರೆ ಯಾವ ಕೆಲಸಾನೂ ಆಗಲ್ಲ. ಬೇರೆ ಏನಾದ್ರೂ ಯೋಚ್ನೆ ಮಾಡೋ"

"ನಂಗೆ ನನ್ನ ಐಡಿಯಾ ಮೇಲೆ ಕಾನ್ಫಿಡೆನ್ಸ್ ಇದೆ ಕಣೋ. ಈ ನನ್ನ ಮಕ್ಳು ಎಥಿಕ್ಸ್, ವ್ಯಾಲ್ಯೂಸ್ ಮಣ್ಣು, ಮಸಿ ಅಂತೆಲ್ಲಾ ಕೈ ಕಟ್ಟಿ ಹಾಕಿದ್ರೆ ಇಂಥವರ ಜೊತೆ ಕೆಲಸ ಮಾಡಕಾಗಲ್ಲ ಅಷ್ಟೇ" ನಿಖಿಲ್ ತಲೆ ಕೊಡವಿದ.

"ಒಂದು ಕೆಲಸ ಮಾಡ್ತೋ, ಹೆಂಗೂ ನೀನೀಗ ಕೆಲಸ ಇಲ್ದೆ ... "

"ಏನೋ ನೀನೂ ಹಂಗಿಸ್ತೀಯಾ? ನಾನಿನ್ನೂ ಮನೇಲಿ ರಿಸೈನ್ ಮಾಡಿರೋ ವಿಷಯ ಹೇಳೇ ಇಲ್ಲ"

"ಅಯ್ಯೋ ಹಾಗಲ್ಲ ಕಣೋ, ಈ ಟೈಮ್ ಅನ್ನು ಉಪಯೋಗಿಸ್ಕೊಂಡು ಏನಾದ್ರೂ ಮಾಡು, ನೀನೇ ಸ್ವಂತಕ್ಕೆ ಪೇಟೆಂಟ್ ಮಾಡ್ಕೋ, ಆಗ ನೋಡು ಬಿಲಿಯನೇರ್ ಆಗ್ಬಿಡ್ತೀಯಾ"

"ಲೇ ನನ್ ಮಗ್ನೆ, ಕಾಫಿ ಕುಡೀತಿದ್ರೂ ಎಣ್ಣೆ ಹೊಡ್ದೋರಂಗೆ ಮಾತಾಡ್ತಿಯಲ್ಲೋ? ನಾನೊಬ್ಬನೇ ಏನ್ ತರಿಯೋಕಾಗುತ್ತೆ ಹೇಳು? ಇಂಥ ಎಸ್ಪಿರಿಮೆಂಟ್ ಗೆ ಕಂಪನಿ ಹೆಸರು ಇಲ್ದೆ ನಾನು ಕರೆದ್ರೆ ಯಾರು ವಾಲಂಟೀರ್ ಆಗ್ತಾರೆ? ಒಂದ್ವೇಳೆ ಆದ್ರೂ ಹೊರಗೆ ಯಾರ ಮುಂದೇನೂ ಬಾಯಿ ಬಿಡಲ್ಲ ಅಂತ ಏನೋ ಗ್ಯಾರಂಟಿ? ಆಮೇಲೆ ಸಿಕ್ಕಿ ಹಾಕ್ಕೊಂಡ್ರೆ ಆ ನನ್ ಮಗ ಬಾಸ್ ನಮ್ಮಿಬ್ಬರನ್ನೂ ಜೈಲಿಗೆ ಹಾಕಿಸ್ತಾನೆ ಅಷ್ಟೇ"

"ನೋಡೋ, ಅಷ್ಟೆಲ್ಲಾ ಹೆದರಿಕೊಂಡ್ರೆ ಕೆಲಸ ಆಗಲ್ಲ. ನಿಂಗೆ ಯಾವ ರೀತಿ ಸಪೋರ್ಟ್ ಬೇಕೋ ನಾನ್ ಕೊಡ್ತೀನಿ, ನೀನ್ ಇದ್ರಲ್ಲಿ ಸಕ್ಸಸ್ ಆದ್ರೆ ನಾವಿಬ್ರೂ ಸೇರ್ಕೊಂಡು ಹೊಸ ಸ್ಟಾರ್ಟ್ ಅಪ್ ಕಂಪನಿ ಮಾಡೋಣ, ಏನಂತೀಯಾ?" ಪ್ರಣವ್ ಹುರಿದುಂಬಿಸಿದ.

ನಿಖಿಲ್ ಎರಡೂ ಕೈಗಳಿಂದ ಕಣ್ಣು ಮುಚ್ಚಿಕೊಂಡು ಮುಖ ತೀಡಿಕೊಳ್ಳುತ್ತಾ ಗೊಂದಲದಲ್ಲಿ ಸುಮ್ಮನೆ ಕುಳಿತುಬಿಟ್ಟ.

"ನಿನ್ನ ರಾಜೀನಾಮೆನ ಅಕ್ಸೆಪ್ಟ್ ಮಾಡ್ಕೊಂಡುಬಿಟ್ರು ಅಂತ ನೀನು ಕೊರಗ್ಬೇಡ ಕಣೋ, ಅದನ್ನು ಮರೆತ್ಬಿಡು. ನೆಸೆಸಿಟಿ ಈಸ್ ಮದರ್ ಆಫ್ ಇನ್ವೆಂಷನ್, ನಿಂಗೆ ತೊಂದ್ರೆ ಕೊಡ್ತಾ ಇರೋ ನೆನಪನ್ನು ನಿನ್ನ ತಲೆಯಿಂದ ಹೆಂಗೆ ಡಿಲೀಟ್ ಮಾಡಬೋದು ಅನ್ನೋದನ್ನೂ ನೀನೇ ಕಂಡುಹಿಡಿತೀಯ ಬಿಡು, ನೀನು ಸಾಮಾನ್ಯದೋನಲ್ಲ" ಪ್ರಣವ್ ಅಷ್ಟು ಸುಲಭವಾಗಿ ಹಿಡಿದ ಕೆಲಸವನ್ನು ಬಿಡಲು ಸಿದ್ದನಿರಲಿಲ್ಲ.

"ಸರಿ, ಒಂದು ವೇಳೆ ಅಂಥದ್ದೇನೋ ಕಂಡುಹಿಡಿದೆ ಅಂತಿಟ್ಕೋ, ಆಗ ನೀನು ನಿನ್ನ ತಲೆಯಿಂದ ಯಾವ ನೆನಪನ್ನು ಅಳಿಸಿ ಹಾಕ್ತಿಯಾ?"

"ನಾನು ...ಉಮ್ ... " ಪ್ರಣವ ಯೋಚಿಸತೊಡಗಿದ. "ಹಾಂ ಆರು ತಿಂಗಳ ಹಿಂದೆ ಶೇರ್ ಮಾರ್ಕೆಟ್ ನಲ್ಲಿ ಹದಿನೈದು ಲಕ್ಷ ಕಳ್ಕೊಂಡಿದ್ದನ್ನ ... ಅಯ್ಯೋ ಮರೀಬೇಕು ಅಂತಿರೋದನ್ನ ಯಾಕೋ ನೆನಪಿಸ್ತಾ ಇದ್ದೀಯಾ? ಮೊದ್ಲು ಕಾನ್ಸೆಪ್ಟ್ ಪ್ರೂವ್ ಮಾಡೋಣ"

"ಆದರೆ ಈಗಾಗಲೇ ಮಾಡಿರೋ ಕೆಲಸದ ಡಾಕ್ಯುಮೆಂಟ್ಸ್ ಯಾವುದನ್ನೂ ನಾನು ಆಕ್ಸೆಸ್ ಮಾಡೋಕಾಗಲ್ಲ, ಆ ಕಂತ್ರಿ ನನ್ಮಗ ಬಾಸು ನಾನು ಕಂಪನಿ ವೆಬ್ಸೈಟ್ ಗೆ ಲಾಗಿನ್ ಆಗದಿರೋ ಹಾಗೆ ಮಾಡಿದಾನೆ." ಎಂದು ಚಿಂತೆಯಿಂದ ನಿಖಿಲ್ ಹೇಳಿದನು.

"ಅದೆಲ್ಲಾ ನೀನು ತಲೆ ಕೆಡಿಸ್ಕೊಬೇಡ ಕಣೋ, ನಿಂಗೇನೇನ್ ಬೇಕು ಹೇಳು, ನಾನು ನಿಂಗೆ ಹೆಲ್ಪ್ ಮಾಡ್ತೀನಿ" ಎಂದು ಪ್ರಣವ್ ಧೈರ್ಯ ತುಂಬಿದನು.

"ನಂಗೆ ಮೈಂಡ್ ಮ್ಯಾಪಿಂಗ್ ಮಾಡೋಕೆ ಮೈಕ್ರೋ ಚಿಪ್ ಬೇಕು, ಸ್ವಲ್ಪ ಪ್ರೈವೇಸಿ ಇರೋ ಜಾಗ ಬೇಕು, ಎಕ್ಸ್ಪಿರಿಮೆಂಟ್ ಗೆ ಒಬ್ಬ ವಾಲಂಟೀರ್ ಬೇಕು, ರಿಸರ್ಚ್ ರೆಪೊಸಿಟರಿಗೆ ಆಕ್ಸೆಸ್ ಬೇಕು, ಕೆಲವು ಟೂಲ್ಸ್ ಎಲ್ಲಾ ಫ್ರೀ ಯಾಗಿ ಆನ್ಲೈನ್ ನಲ್ಲಿ ಸಿಗ್ತವೆ. ಇಂಟರ್ನೆಟ್ ಬೇಕು... "

ಪ್ರಣವನ ಒತ್ತಾಯಕ್ಕೆ ಕೊನೆಗೂ ನಿಖಿಲ್ ಏನೋ ನಿರ್ಧರಿಸಿದವನಂತೆ ತಲೆಯಾಡಿಸಿ ಮನೆಗೆ ಹೊರಟನು.

***

ನ್ಯೂರೋಫಿಸಿಯಾಲಜಿಯಲ್ಲಿ ಪಿ.ಎಚ್.ಡಿ ಮುಗಿಸಿದಾಗಿನಿಂದ ಒಂದು ದಿನವೂ ಮನೆಯಲ್ಲಿ ಕೂರದವನು ಈಗ ಒಂದು ದಿನವೂ ಆಫೀಸ್ ಗೆ ಹೋಗದಿರುವುದನ್ನು ನೋಡಿ, ಮೊದಲಿಗೆ ಅವನ ಹೆಂಡತಿಗೆ ನಿಖಿಲ್ ಕೆಲಸ ಕಳೆದುಕೊಂಡಿರಬಹುದೇ ಎಂದು ಅನುಮಾನ ಹುಟ್ಟಿದ್ದರೂ ಕೇಳುವ ಧೈರ್ಯವಿರದೆ ಸುಮ್ಮನೆ ತನ್ನ ಪಾಡಿಗೆ ತಾನು ಐಟಿ ಕಂಪನಿಯ ಕೆಲಸಕ್ಕೆ ಹೋಗುತ್ತಿದ್ದಳು. ನಡುಮನೆಗೆ ಹೊಂದಿಕೊಂಡೇ ಇದ್ದ ಊಟದಮನೆಯ ಡೈನಿಂಗ್ ಟೇಬಲ್ ಮೇಲೆ ಬೆಳಗ್ಗೆ ಏಳೂವರೆ -ಎಂಟು ಗಂಟೆಗೆಲ್ಲಾ ತನ್ನ ಹಳೆಯ ಲ್ಯಾಪ್ ಟಾಪ್ ನೊಂದಿಗೆ ನಿಖಿಲ್ ಪ್ರತಿಷ್ಠಾಪನೆಯಾಗಿಬಿಟ್ಟರೆ, ರಾತ್ರಿ ಊಟದ ಸಮಯವಾದರೂ ಅಲ್ಲಾಡುತ್ತಿರಲಿಲ್ಲ. ಅವನ ಇಬ್ಬರು ಗಂಡು ಮಕ್ಕಳಿಗೂ ನಿಖಿಲ್ ಮನೆಯಲ್ಲೇ ಇರುತ್ತಿದ್ದುದರಿಂದ ಶಾಲೆಯಿಂದ ಮರಳಿದ ಮೇಲೆ ಸಂಜೆ ವಿಡಿಯೋ ಗೇಮ್ಸ್ ಆಡಲು ಅವಕಾಶವೇ ಸಿಗದಂತಾಗಿತ್ತು. ಅವನ ಸುತ್ತ ಮುತ್ತ ಯಾರೂ ಸುಳಿಯುವ ಹಾಗಿರಲಿಲ್ಲವಾದ್ದರಿಂದ ಮನೆಯೆಲ್ಲಾ ಧುಮುಗುಡುವ ವಾತಾವರಣ ಸೃಷ್ಟಿಯಾಗಿಬಿಟ್ಟಿತ್ತು. ಸಣ್ಣ ಪುಟ್ಟ ವಿಷಯಕ್ಕೆಲ್ಲಾ ಕಿರಿಕಿರಿಯಾಗುತ್ತಿದ್ದ ನಿಖಿಲ್ ಹೇಗಾದರೂ ಮೊದಲಿನಂತಾದರೆ ಸಾಕೆಂದು ಅಮ್ಮ ಮತ್ತು ಮಕ್ಕಳು ಬೇಡಿಕೊಳ್ಳುತ್ತಿದ್ದರು.

ಅಂತಹ ಸನ್ನಿವೇಶದಲ್ಲಿ ನಿಖಿಲ್ ಇದ್ದಕ್ಕಿದ್ದಂತೆ ತಾನು ಕೆಲವು ತಿಂಗಳುಗಳು ಊರಿಗೆ ಹೋಗಿ ಅಪ್ಪನೊಂದಿಗೆ ಇದ್ದು ಬರುತ್ತೇನೆಂದಾಗ, ಯಾರೂ ತಡೆಯಲಿಲ್ಲ. 'ರಜೆಯಲ್ಲಿ ಇಬ್ಬರೂ ಊರಿಗೆ ಬಂದುಬಿಡಿ, ಅಲ್ಲಿ ಮನೆ ಮುಂದೆ ಬೇಕಾದಷ್ಟು ಜಾಗ ಇದೆ, ಕ್ರಿಕೆಟ್ ಆಡೋಣ' ಎಂದು ಹೇಳಿದಾಗಲೂ ಮಕ್ಕಳ ಮುಖದಲ್ಲಿ ಅಂತ ಉತ್ಸಾಹವೇನೂ ಕಾಣಲಿಲ್ಲ.

ಬೆಂಗಳೂರಿನಿಂದ ಸುಮಾರು ಎಪ್ಪತ್ತು ಕಿಲೋಮೀಟರು ದೂರದಲ್ಲಿದ್ದ ತನ್ನ ಹುಟ್ಟೂರಿಗೆ ತನ್ನ ದೊಡ್ಡ ಕಾರಿನಲ್ಲಿ ಕಂಪ್ಯೂಟರುಗಳು, ಟಿವಿ ಸ್ಕ್ರೀನ್ ಗಳು, ಲ್ಯಾಪ್ಟಾಪ್ ಮುಂತಾದ ಸಾಮಾನುಗಳನ್ನು ತುಂಬಿಕೊಂಡು ಹೊರಟೇ ಬಿಟ್ಟಾಗ, ದಾರಿಯುದ್ದಕ್ಕೂ ಹೆಂಡತಿಯಾಗಲೀ, ಮಕ್ಕಳಾಗಲೀ, ವಾಪಸ್ ಯಾವಾಗ ಬರ್ತೀರಿ ಎಂದು ಕೂಡ ಕೇಳಲಿಲ್ಲವೆಂದು ಬೇಸರಪಟ್ಟುಕೊಂಡನು. ಕೆಲಸವಿಲ್ಲದೆ ಮನೆಯಲ್ಲಿ ಕುಳಿತರೆ ಹೆಂಡತಿ ಮಕ್ಕಳೂ ಸೀರಿಯಸ್ ಆಗಿ ತಗೋಳೋದಿಲ್ವೇನೋ ಎಂದು ಚಿಂತೆಯಾಯಿತು. ಆದಷ್ಟು ಬೇಗ ಈ ರಿಸರ್ಚ್ ಮುಗಿಸಿ ಎಲ್ಲಾದರೂ ಬೇರೆ ಕಡೆ ಸೇರಿಕೊಳ್ಳಬೇಕು ಎಂದು ನಿರ್ಧರಿಸಿದ.

ಇಪ್ಪತ್ತು ವರ್ಷಗಳ ಹಿಂದೆಯೇ ಹೆಂಡತಿಯನ್ನು ಕಳೆದುಕೊಂಡಿದ್ದ ನಿಖಿಲನ ಅಪ್ಪ ದೊಡ್ಡೇ ಗೌಡರು ಊರಿನಲ್ಲಿ ಒಂಟಿಯಾಗಿಯೇ ಉಳಿದುಬಿಟ್ಟಿದ್ದರು. ಹೆಚ್ಚು ಓಡಾಡಲು ಆಗದೆ ಇದ್ದರೂ, ಮಗನೊಂದಿಗೆ ಹೋಗದೆ, ವಾರಕ್ಕೊಮ್ಮೆಯಾದರೂ ಮಗ, ಸೊಸೆ, ಮೊಮ್ಮಕ್ಕಳು ಎಲ್ಲಾ ಊರಿಗೇ ಬರ್ತಾರೆ ಎಂದು ನಂಬಿ ಬಹಳ ದೊಡ್ಡದಾಗಿ ಎರಡಂತಸ್ತಿನ ಮನೆ ಕಟ್ಟಿಸಿಬಿಟ್ಟಿದ್ದರು. ಆದರೆ ತಿಂಗಳಿಗೊಮ್ಮೆಯೂ ಯಾರೂ ಬರುವುದಿಲ್ಲ ಎನ್ನುವುದು ಬಹಳ ತಡವಾಗಿ ಅರಿವಾಗಿತ್ತು ಗೌಡರಿಗೆ. ಅವರ ಊಟ, ತಿಂಡಿ, ಮನೆಗೆಲಸವನ್ನೆಲ್ಲಾ ಕೆಲಸಕ್ಕಿಟ್ಟುಕೊಂಡಿದ್ದ ಸೌಭಾಗ್ಯ ನೋಡಿಕೊಳ್ಳುತ್ತಿದ್ದಳು. ಅವಳ ಇಪ್ಪತ್ತು ವರ್ಷದ ಮಗ ಸೂರಿ, ತೋಟದ ಕೆಲಸವನ್ನು ನೋಡಿಕೊಳ್ಳುವುದರ ಜೊತೆಗೇ ಕಾಲೇಜಿನಲ್ಲಿ ಓದುತ್ತಿದ್ದ. ನಿಖಿಲ್ ಬರುವ ವಿಚಾರವನ್ನು ಮೊದಲೇ ತಿಳಿಸಿದ್ದರಿಂದ ವಯಸ್ಸಾಗಿದ್ದರೂ ಗೌಡರು ಬಹಳ ಉತ್ಸಾಹದಿಂದ ಮೇಲಿನ ಕೋಣೆಯನ್ನು ಸ್ವಚ್ಛ ಮಾಡಿಸಿ, ಅವನಿಗಿಷ್ಟವಾದ ಅಡಿಗೆಯನ್ನೇ ಮಾಡಿಸಿಕೊಂಡು ಕಾಯುತ್ತಿದ್ದರು.

ಮಗ ಒಂದಾರು ತಿಂಗಳು ಇರೋಕ್ಕೆ ಬರ್ತೀನಿ ಎಂದು ಫೋನ್ ನಲ್ಲಿ ಹೇಳಿದ್ದಾಗ ಅಚ್ಚರಿಗೊಂಡರೂ, ಕಾರಣವನ್ನು ಕೇಳಲು ಸಂಕೋಚವಾಗಿ ಸುಮ್ಮನಿದ್ದುಬಿಟ್ಟಿದ್ದ ಗೌಡರಿಗೆ ಊಟಕ್ಕೆ ಕುಳಿತಾಗ ಕೇಳದೇ ಇರಲಾಗಲಿಲ್ಲ. "ಯಾಕೋ ಮಗಾ, ಏನು ಸಮಾಚಾರ? ಮನೇಲಿ ಹೆಂಡ್ತಿ ಮಕ್ಳು ಎಲ್ಲಾ ... "

ಸೌಭಾಗ್ಯ ಬಿಸಿಬಿಸಿ ಅಕ್ಕಿ ರೊಟ್ಟಿ ತಂದು ಬಡಿಸಿದಳು.

ತನಗೆ ಬುದ್ಧಿ ಬಂದಾಗಿನಿಂದಲೂ ಅಪ್ಪನ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸೌಭಾಗ್ಯಳನ್ನು ನಿಖಿಲ್ ಮೊದಲ ಬಾರಿಗೆ ನೋಡುತ್ತಿರುವಂತೆ ನೋಡಿದ. ತಾವಿಬ್ಬರೂ ಜೊತೆಯಲ್ಲೇ ಶಾಲೆಗೆ ಹೋಗುತ್ತಿದ್ದರೂ, ಊರಿಗೆ ಗೌಡರ ಮಗನಾದ ತನ್ನ ಮತ್ತು ಮನೆಗೆಲಸದಾಳಿನ ಮಗಳಾದ ಅವಳ ಬದುಕುಗಳು ಇಂದು ಎಷ್ಟು ಭಿನ್ನವಾಗಿಬಿಟ್ಟಿವೆ ಎಂದು ಸೋಜಿಗ ಪಟ್ಟ. ಹೈ ಸ್ಕೂಲ್ ಗೆ ಬೆಂಗಳೂರು ಸೇರಿದವನು ಮತ್ತೆ ಊರಿಗೆ ಬರಲೇ ಇಲ್ಲವಾದ್ದರಿಂದ, ಸೌಭಾಗ್ಯ ಇರಲಿ, ಊರಿನ ಯಾವ ವ್ಯಕ್ತಿಯನ್ನೂ ತಾನು ಹಚ್ಚಿಕೊಳ್ಳಲೇ ಇಲ್ಲ ಎನ್ನುವುದು ಆ ಕ್ಷಣದಲ್ಲೂ ಅವನ ಗಮನಕ್ಕೆ ಬಂತು. ತಾನು ಬಂದಿರುವುದು ಅವಳಿಗೆ ಇಷ್ಟವಿಲ್ಲವೇನೋ ಎನ್ನುವಂತೆ ಎತ್ತಲೋ

ನೋಡುತ್ತಿದ್ದ ಅವಳ ಕಾಂತಿಯಿರದ ಕಣ್ಣುಗಳು, ಉದ್ದೇಶವೇ ಇಲ್ಲದ ಬದುಕನ್ನು ಬಲವಂತಕ್ಕೆ ಬದುಕುತ್ತಿರುವ ನಿರುತ್ಸಾಹ, ಮಡುಗಟ್ಟಿದ ನೋವು, ಬೋಳು ಹಣೆ, ಬೋಳು ಕುತ್ತಿಗೆ, ಮಾಸಿದ ಸೀರೆಗಳು ಎಲ್ಲವೂ ಎಷ್ಟು ಶಾಶ್ವತವಾಗಿಬಿಟ್ಟಿವೆಯಲ್ಲ ಎಂದು ಒಮ್ಮೆ ಬೆಚ್ಚಿದ. ಅದೇ ಕಣ್ಸೆಳೆಯುವ ಸರಳ ರೂಪ, ಅದೇ ಸ್ವಾಮಿ ನಿಷ್ಟೆ! ತಾನು ಅವಳನ್ನು ಒಂದೆರಡು ವರ್ಷಗಳ ಹಿಂದೆ ನೋಡಿದ್ದು ಎನ್ನುವುದು ನೆನಪಾಯಿತು. ಅವಳ ಬಗ್ಗೆ ಊರಿನಲ್ಲಿ ಬಾಯಿಗೆ ಬಂದ ಹಾಗೆ ಮಾತನಾಡುವವರೇ ಹೆಚ್ಚಿದ್ದರು.

ಗಂಡ ಸತ್ತ ಮೇಲೆ ಮಗನ್ನ ಹಡೆದಿದ್ದಾಳೆ;

ಯಾರೋ ರೇಪ್ ಮಾಡಿದಾಗಿನಿಂದ ಮೂಕಿಯಾಗಿದ್ದಾಳೆ;

ಮಗನ ಅಪ್ಪ ಬದುಕಿದ್ರೂ ವರ್ಷಾ ವರ್ಷ ಅವನ ಹೆಸರಲ್ಲಿ ತಿಥಿ ಮಾಡಿಸ್ತಾಳೆ;

ಪೇಟೆಯ ಆಸ್ಪತ್ರೆಯಿಂದ ಮಗು ಕದ್ದು ತಂದಿದ್ದಾಳೆ;

ಹೀಗೆ ಜನರ ಬಾಯಲ್ಲಿ ಏನೇನೋ ಆಗಿಬಿಟ್ಟಿದ್ದ ಅವಳ ನಿಜವಾದ ರೂಪವನ್ನು ಅರಿತುಕೊಳ್ಳುವ ಕುತೂಹಲ ಹಲವು ಬಾರಿ ಆಗಿದ್ದರೂ ನಿಖಿಲ್ ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ ಈ ಬಾರಿ ಎಲ್ಲಾ ತಿಳಿದುಕೊಳ್ಳಲೇ ಬೇಕೆಂದು ನಿರ್ಧರಿಸಿದನು.

"ಏನಿಲ್ಲ ಅಪ್ಪ, ನಾನೊಂದು ರಿಸರ್ಚ್ ಮಾಡಬೇಕಿದೆ. ಅದು ಬಹಳ ಟೈಮ್ ತಗೊಳುತ್ತೆ. ಅದಕ್ಕೆ ಬಹಳ ದೊಡ್ಡ ಜಾಗ ಬೇಕು, ಸ್ವಲ್ಪ ಪೀಸ್ಫುಲ್ ಆಗಿರೋ ವಾತಾವರಣ ಬೇಕು ಅಂತ ಬಂದಿದ್ದೇನೆ ಅಷ್ಟೇ. ವೀಕೆಂಡ್ಸ್ ನಲ್ಲಿ ನನ್ನ ಫ್ರೆಂಡ್ ಪ್ರಣವ್ ಕೂಡ ಬರ್ತಾನೆ, ಅದೇ ನನ್ನ ಎಕ್ಸ್ ಕೊಲೀಗ್, ಅಂದ್ರೆ ಇನ್ನೂ ಕೊಲೀಗೇ... " ನಿಖಿಲ್ ತಡವರಿಸಿ ಊಟದ ತಟ್ಟೆಯಿಂದ ಕಣ್ಣು ಕೀಳದೆ ಉತ್ತರಿಸಿದನು.

"ಹೂಂ, ನಿನಗಿದು ಪೀಸ್ಫುಲ್ಲು; ನನಗೆ ಎಟರ್ನಲ್ ಸೈಲೆನ್ಸು!"

ನಿಖಿಲ್ ಅಪ್ಪನ ಕಣ್ಣುಗಳಲ್ಲಿ ಮಡುಗಟ್ಟಿದ್ದ ವಿಷಾದವನ್ನು ನೋಡಿ ನಿಟ್ಟುಸಿರಿಟ್ಟನು. ಊರಿನಲ್ಲಿ ಅಪ್ಪನಿಗೆ ಬಹಳ ಗೌರವ. ಎಷ್ಟೇ ತೊಂದರೆಯಾದರೂ ತಮ್ಮೊಂದಿಗೆ ಬೆಂಗಳೂರಿಗೆ ಬರಲು ಒಪ್ಪದೆ, ಊರಿನಲ್ಲಿದ್ದುಕೊಂಡೇ ಜೀವನ ಸಾಗಿಸುತ್ತಿದ್ದರು. ಊರಲ್ಲಿ ಎಲ್ಲರ ಮಾತುಗಳನ್ನೂ, ತೊಂದರೆಗಳನ್ನೂ ತಾಳ್ಮೆಯಿಂದ ಕೇಳಿಸಿಕೊಂಡು ಕೈಲಾದ ಸಹಾಯ ಮಾಡುತ್ತಿದ್ದ ಅಪ್ಪನ ಬಗ್ಗೆ ನಿಖಿಲ್ ಗೂ ಅಭಿಮಾನವಿತ್ತು.

"ಮಗಾ, ನೀನು ಯಾರಿಂದನೋ ತಪ್ಪಿಸ್ಕೊಳ್ತಾ ಇಲ್ಲ ತಾನೇ?" ಅಪ್ಪ ಸುಲಭಕ್ಕೆ ಒಪ್ಪಿಕೊಳ್ಳುವವರಲ್ಲವೆಂದು ನಿಖಿಲ್ ಗೆ ಗೊತ್ತಿತ್ತು.

"ಹಾಗೇನಿಲ್ಲ ಅಪ್ಪ, ನೀನೇ ನೋಡುವಿಯಂತೆ" ಎಂದು ಸರ ಸರನೆ ಊಟ ಮುಗಿಸಿ ಮೇಲಿನ ತನ್ನ ಕೋಣೆ ಸೇರಿಕೊಂಡನು.

***

ಮೇಲಿನ ಕೋಣೆಯಲ್ಲಿ ತನ್ನ ಸಾಮಾನುಗಳನ್ನೆಲ್ಲಾ ಜೋಡಿಸಿಕೊಂಡ ನಿಖಿಲ್ ಕಿಟಕಿಯಿಂದ ಹೊರಗೆ ಇಣುಕಿದಾಗ ದೊಡ್ಡ ಮಾವಿನ ಮರ ಗಾಳಿಗೆ ಹೊಯ್ದಾಡುತ್ತಿತ್ತು. ಆ ಮರದ ಕೆಳಗೆ

ಅವನ ಬಾಲ್ಯ ಕಳೆದಿತ್ತು. ಚಿಕ್ಕವನಿಂದಲೂ ಕ್ರಿಕೆಟ್ ಇಷ್ಟ ಪಡುತ್ತಿದ್ದ ನಿಖಿಲ್ ಆ ಮರದ ಕಾಂಡದ ಮೇಲೇ ಕೊರೆದಿದ್ದ ವಿಕೆಟ್ ಅನ್ನು ನೋಡಿ ಮುಗುಳ್ನಕ್ಕನು.

ಒಂದು ವಾರ ಕಳೆದರೂ ಊರಿನಲ್ಲಿ ತನ್ನ ಕೆಲಸಕ್ಕೆ ಸೂಕ್ತ ವ್ಯಕ್ತಿಯನ್ನು ಹುಡುಕಿಕೊಳ್ಳುವುದು ಸಾಧ್ಯವಾಗಲಿಲ್ಲ. ಯಾರನ್ನಾದರೂ ಹೇಗೆ ಕೇಳುವುದು? ತನ್ನ ಪ್ರಯೋಗಗಳ ಉದ್ದೇಶವನ್ನು ಅರ್ಥ ಮಾಡಿಕೊಳ್ಳುವವರು ಈ ಊರಿನಲ್ಲಿ ಸಿಗುತ್ತಾರೋ ಇಲ್ಲವೋ ಎಂದು ಅನುಮಾನಿಸುತ್ತಿರುವಾಗಲೇ ಅಂಗಳವನ್ನು ಗುಡಿಸುತ್ತಿದ್ದ ಸೌಭಾಗ್ಯ ಕಣ್ಣಿಗೆ ಬಿದ್ದಳು. ಮೊದಲೆಲ್ಲಾ ಖುಷಿಯಾಗೇ ಇರುತ್ತಿದ್ದವಳು ಈಗ ಹೀಗಾಗಿದ್ದಾಳೆ. ಇದರ ಹಿಂದೆ ಅವಳ ಕತೆ ಏನೇ ಆಗಿದ್ದರೂ, ಖಂಡಿತ ಅವಳಿಗೂ ಮರೆಯಬೇಕೆನ್ನುವ ನೂರಾರು ನೆನಪುಗಳಿರುತ್ತವೆ, ಕಾಲೇಜಿನಲ್ಲಿ ಓದುತ್ತಿರುವ ಸೂರಿಗೆ ಹೇಳಿದರೆ ಹೇಗೂ ಅರ್ಥ ಮಾಡಿಕೊಳ್ಳುತ್ತಾನೆ, ಇಲ್ಲದಿದ್ದರೆ ಹಣದ ಆಮಿಷ ಒಡ್ಡಬಹುದು ಎಂದೆಲ್ಲಾ ಯೋಚಿಸಿದ.

ಹೆಚ್ಚು ಮಾತಾಡದ ಸೌಭಾಗ್ಯ ನಿಖಿಲನಿಗೆ ತೊಂದರೆಯಾಗದಂತೆ, ಸಿಕ್ಕಷ್ಟೇ ಸಮಯದಲ್ಲಿ ಸರಸರನೆ ಕೆಲಸ ಮಾಡಿ ಮುಗಿಸಿ ಓಡುತ್ತಿದ್ದಳು. ಅವಳನ್ನು ಮಾತಿಗೆಳೆಯುವುದೇ ಕಷ್ಟವಾಗಿರುವಾಗ, ತನ್ನ ಯೋಜನೆಯನ್ನು ವಿವರಿಸಿ ಅರ್ಥ ಮಾಡಿಸುವುದು, ಒಪ್ಪಿಸುವುದೆಲ್ಲಾ ಹೇಗೆಂದು ತಲೆ ಕೆಡಿಸಿಕೊಂಡಿದ್ದಾಗಲೇ ಒಂದು ದಿನ ಇದ್ದಕ್ಕಿದ್ದಂತೆ ಪ್ರಣವ್ ಬಂದಿಳಿದ. ಊಟ ಮುಗಿಸಿ ಮೇಲಿನ ಕೋಣೆಯಲ್ಲಿ ಇಬ್ಬರೂ ವಿಶ್ರಾಂತಿ ಪಡೆಯುತ್ತಿದ್ದಾಗ ಸೌಭಾಗ್ಯ ಮಜ್ಜಿಗೆಯ ತಂಬಿಗೆ ತಂದಿಟ್ಟಳು. ಪ್ರಣವ್ ಇದೇ ಸರಿಯಾದ ಸಮಯವೆಂದು, "ಮೇಡಂ ಮೇಡಂ ... " ಎಂದು ಅವಳೆದುರು ಕೈ ಅಡ್ಡಗಟ್ಟಿ ತಡವರಿಸಿದ. ಅವನ ವರ್ತನೆಯಿಂದ ಗಾಬರಿಗೊಂಡ ಸೌಭಾಗ್ಯ ನಿಖಿಲ್ ಕಡೆ ಸಿಟ್ಟಿನಿಂದ ನೋಡಿದಳು.

"ನಿಂಜೊತೆ ಸ್ವಲ್ಪ ಮಾತಾಡ್ಬೇಕು, ಕುತ್ಕೋ" ಎಂದು ನಿಖಿಲ್ ಸಮಾಧಾನದಿಂದ ಹೇಳಿದ. "ನಾವು ಒಂದು ಪ್ರಯೋಗ ಮಾಡ್ತಿದೀವಿ, ಇದ್ರಿಂದ ಯಾವುದೋ ಕಹಿ ನೆನಪನ್ನು ಮರೆಯೋಕಾಗದೇ ಮಾನಸಿಕವಾಗಿ ಒದ್ದಾಡ್ತಾ ಇರೋವ್ರಿಗೆ ಮತ್ತೆ ಮನಸ್ಸು ಶಾಂತವಾಗುತ್ತೆ, ನೆಮ್ಮದಿ ಸಿಗುತ್ತೆ, ನೀನು ಏನೂ ಮಾಡಬೇಕಿಲ್ಲ. ಸುಮ್ಮನೆ ಮಲಗಿಕೊಂಡು ನಿದ್ದೆ ಮಾಡಬೇಕು ಅಷ್ಟೇ" ಎಂದು ವಿವರಿಸಿದ. ಇಬ್ಬರೂ ಬಹಳ ಹೊತ್ತು ಹೆಣಗಾಡಿದ ನಂತರ ಒಂದು ಷರತ್ತಿನ ಮೇಲೆ ಸೌಭಾಗ್ಯ ಒಪ್ಪಿಕೊಂಡಳು. ಅದೇನೆಂದರೆ, ಇದೆಲ್ಲಾ ಮುಗಿದ ಮೇಲೆ ಕೈತುಂಬಾ ದುಡ್ಡು ಕೊಟ್ಟರಷ್ಟೇ ಸಾಲದು, ಅವಳಿಗೂ, ಅವಳ ಮಗನಿಗೂ ಈ ಊರನ್ನೇ ಬಿಟ್ಟು ಬೇರೆ ಊರಿನಲ್ಲಿ ಜೀವನ ಮಾಡಲು ವ್ಯವಸ್ಥೆ ಮಾಡಿಕೊಡಬೇಕೆನ್ನುವುದು!

ಅಪ್ಪನ ಮೇಲಿನ ನಿಷ್ಠೆಯಿಂದ ಸೌಭಾಗ್ಯ ಈ ಮನೆಯನ್ನು ಇಷ್ಟು ವರ್ಷಗಳಾದರೂ ತೊರೆದಿಲ್ಲವೆಂದು ನಂಬಿದ್ದ ನಿಖಿಲ್ ಗೆ ಮೊದಲ ಬಾರಿಗೆ ಗೊಂದಲವಾಯಿತು. ಕಷ್ಟವೆನಿಸಿದರೂ ಬೇರೆ ವಿಧಿಯಿಲ್ಲದೇ ಒಪ್ಪಿಕೊಂಡ.

***

ಅವನ ರೂಮಿನಲ್ಲಿ ಎರಡು ದೊಡ್ಡ ಟಿವಿ ಸ್ಕ್ರೀನ್ ಗೋಡೆಗೆ ಅಂಟಿಕೊಂಡವು. ಎರಡು ಕಂಪ್ಯೂಟರುಗಳು, ಒಂದು ಲ್ಯಾಪ್ಟಾಪ್ ಸಿಕ್ಕಷ್ಟೇ ಜಾಗದಲ್ಲಿ ತೆರೆದುಕೊಂಡವು. ಹತ್ತಾರು ಕೇಬಲ್ ಗಳು ನೆಲದ ಮೇಲೆ ಹರಡಿಕೊಂಡವು. ಮತ್ತಷ್ಟು ಪುಸ್ತಕಗಳು ಮಂಚದ ಮೇಲೆ ಬಿದ್ದವು. ನಡುಮನೆಯಲ್ಲಿದ್ದ ದಿವಾನ್ ಬೆಡ್ ಮೇಲಿನ ಕೋಣೆಯಲ್ಲಿ ಚಾಚಿಕೊಂಡಿತು. ವೈಫೈ ಬಂತು, ಗೋಡೆ ತುಂಬಾ, ಡೆಸ್ಕ್ ಮೇಲೆ ಎಲ್ಲೆಂದರಲ್ಲಿ ಸಣ್ಣ ಸಣ್ಣ ಚೀಟಿಗಳು ಅಂಟಿಕೊಂಡವು.

ಮೊದಲ ಬಾರಿ ಪ್ರಯೋಗಕ್ಕೊಳಗಾಗುವಾಗ ಸೌಭಾಗ್ಯ ದಿಗಿಲುಗೊಂಡಳು. ಮುಗಿಲ ಮಲ್ಲಿಗೆಯಾಗಿದ್ದವನ ಮುಂದೆ ಮಲಗುವುದೇ? ಅದೂ ನಿದ್ದೆ ಹೋಗಬೇಕೆಂದರೆ ಹೇಗೆ ಸಾಧ್ಯ? ನಾನು ನಿದ್ದೆ ಹೋದಾಗ ಇವನು ನನ್ನನ್ನು ಮುಟ್ಟಿದರೆ? ಮುಟ್ಟಿದಾಗ ನಾನು ಸುಮ್ಮನಿದ್ದುಬಿಟ್ಟರೆ ಎಂದೆಲ್ಲಾ ಯೋಚಿಸಿ ತತ್ತರಿಸಿದಳು. ಕ್ರಮೇಣ ನಿಖಿಲ್ ತನ್ನನ್ನು ಎಂದಿಗೂ ಹಾಗೆ ನೋಡಲೇ ಇಲ್ಲವೇನೋ ಎನಿಸಿ ನಿರಾಳತೆಯಿಂದ ಸಹಕರಿಸತೊಡಗಿದಳು.

ಇತ್ತೀಚಿಗೆ ಮೇಲೆ ಮಗನ ಕೋಣೆಯಲ್ಲಿ ಸೌಭಾಗ್ಯ, ಹೆಚ್ಚು ಸಮಯ ಕಳೆಯುತ್ತಿರುವುದನ್ನು ಗಮನಿಸಿದ ದೊಡ್ಡೇಗೌಡರು ಒಳಗೇ ಚಡಪಡಿಸಿದರೂ ಬಾಯಿ ಬಿಟ್ಟು ಏನನ್ನೂ ಹೇಳಲಾರದೆ ಸುಮ್ಮನಾದರು. ಒಂದು ದಿನ ಏನಾದರೂ ಮಾಡಿ ರೆಡ್ ಹ್ಯಾಂಡೆಡ್ ಆಗಿ ಹಿಡಿಯಬೇಕೆಂದುಕೊಂಡರೂ ಮೇಲಿನ ಮಹಡಿಗೆ ಹತ್ತುವುದು ಸಂಧಿವಾತದಿಂದ ಬಳಲುತ್ತಿದ್ದ ಅವರಿಂದ ಸಾಧ್ಯವಿರಲಿಲ್ಲ.

ಪ್ರಯೋಗಕ್ಕೆ ಬೇಕಾದ ಹಾಗೆ ಸೌಭಾಗ್ಯಳನ್ನು ಸಿದ್ಧಗೊಳಿಸಿ ಎರಡು ವಾರಗಳಾದರೂ ಮೈಕ್ರೋ ಚಿಪ್ ತರುವ ಭರವಸೆ ಕೊಟ್ಟಿದ್ದ ಪ್ರಣವ ಬರಲೇ ಇಲ್ಲ. ಇನ್ನು ಈ ಕೆಲಸ ಕೆಟ್ಟಿತೆಂದು ನಿಖಿಲ್ ಹತಾಶನಾದ. ಒಂದು ಕಂಪನಿಯಿಂದ ಅಷ್ಟು ಮಹತ್ವದ ವಸ್ತುವನ್ನು ಕದಿಯುವುದು ಅಷ್ಟು ಸುಲಭದ ಮಾತಲ್ಲ ಎನ್ನುವುದು ಅವನಿಗೂ ಗೊತ್ತಿತ್ತು. ತಾನು ದುಡುಕಿ ಕೆಲಸ ಬಿಡಬಾರದಿತ್ತು, ಏನಾದರೂ ಮಾಡಿ ಬಾಸ್ ಅನ್ನು ಒಪ್ಪಿಸಿದ್ದಿದ್ದರೆ ಇಂದು ಹೀಗೆ ಕದ್ದು ಮುಚ್ಚಿ ಕೆಲಸ ಮಾಡಬೇಕಾಗಿರಲಿಲ್ಲ ಎಂದು ಹಳಿದುಕೊಂಡನು.

ಮತ್ತೆರಡು ವಾರಗಳು ಕಳೆದ ಮೇಲೆ ಕೊನೆಗೂ ಪ್ರಣವ್ ಬೆಂಗಳೂರಿನಿಂದ ಬಂದಿಳಿದ. ಬರುವಾಗ ಅವನೂ ಮತ್ತಷ್ಟು ಸಾಮಾನುಗಳನ್ನು ತಂದಿದ್ದನ್ನು ಗೌಡರು ಗಮನಿಸಿದರು. ಅವನು ಸೀದಾ ಮೇಲಿನ ಕೋಣೆಗೆ ಹೋದಾಗ ಸೌಭಾಗ್ಯ ಮಂಚದ ಮೇಲೆ ಕಣ್ಣು ಮುಚ್ಚಿಕೊಂಡು ಮಲಗಿದ್ದಳು. ಅವಳ ತಲೆಗೆ ಹತ್ತಾರು ಕೇಬಲ್ ಗಳನ್ನು ಅಂಟಿಸಲಾಗಿತ್ತು. ಅವುಗಳ ಇನ್ನೊಂದು ತುದಿಯಲ್ಲಿ ಆಸ್ಪತ್ರೆಗಳಲ್ಲಿರುವಂತಹ ಉಪಕರಣಗಳಿದ್ದವು. ಪ್ರಣವನನ್ನು ನೋಡಿದೊಡನೆ ಕಣ್ಣರಳಿಸಿದ ನಿಖಿಲ್ "ಮೈಕ್ರೋ ಚಿಪ್ ತಂದ್ಯಾ?" ಎಂದು ಕೇಳಿದ.

"ಮತ್ತೆ, ತರದೇ ಇರ್ತಿನಾ?" ಎಂದು ಖುಷಿಯಿಂದ ಗಾಳಿಯಲ್ಲಿ ಮುಷ್ಟಿ ಮಾಡಿ ಗುದ್ದಿ, ತನ್ನ ಶರ್ಟ್ ಜೇಬಿನಿಂದ ಪುಟ್ಟ ಪೊಟ್ಟಣವನ್ನು ನಿಖಿಲ್ ಕೈಗಿಟ್ಟನು. ಅದನ್ನು ನೋಡಿ ನಿಖಿಲ್ ಕಣ್ಣಾಲಿಗಳು ತುಂಬಿ ಬಂದವು. "ದೋಸ್ತಾ ಅಂದ್ರೆ ನೀನೇ ಕಣೋ" ಎಂದು ತಬ್ಬಿಕೊಂಡನು.

"ನೋಡಪ್ಪ ಇದ್ರಲ್ಲಿ ದೋಸ್ತಿ ಗೀಸ್ತಿ ಏನಿಲ್ಲ. ನೀನು ಸಕ್ಸೀಡ್ ಆದ್ರೆ, ನನ್ನ ಪಾರ್ಟ್ನರ್ ಮಾಡ್ಕೋಬೇಕು ಅಷ್ಟೇ"

"ಪಾರ್ಟ್ನರ್ ಏನು, ನೀನೇ ಬಾಸ್ ಕಣೋ" ಎಂದು ಖುಷಿಯಿಂದ ನಿಖಿಲ್ ಹೇಳಿದ.

"ಇದನ್ನು ಎಲ್ಲಾದರೂ ನೋಟ್ ಮಾಡಿಟ್ಟುಕೊಳ್ತೀನಿ" ಪ್ರಣವ್ ತಮಾಷೆ ಮಾಡಿದ.

ನಿಖಿಲ್ ಚಿಪ್ ಅನ್ನು ಮಲಗಿದ್ದ ಸೌಭಾಗ್ಯಳ ಹಣೆಯ ಮೇಲೆ ಇಟ್ಟು ಸೌಭಾಗ್ಯಳ ಮೆದುಳಿನಲ್ಲಿರುವ ನೆನಪುಗಳನ್ನು ಟಿವಿ ಪರದೆಯ ಮೇಲೆ ಮೂಡುವಂತೆ ಮಾಡಲು ಪ್ರಯತ್ನಿಸಿದನು. ಆ ಚಿಪ್ ಪ್ರಯೋಗಕ್ಕೊಳ ಪಡುವ ಮನುಷ್ಯರ ನರಮಂಡಲವನ್ನು ಗ್ರಹಿಸಲು ಬಹಳ ಮುಖ್ಯವಾದ ಸಾಧನವಾಗಿತ್ತು. ಪ್ರಣವ್ ಅದನ್ನು ಆಫೀಸಿನಿಂದ ಕದ್ದು ತಂದುಕೊಟ್ಟು ಎಂಥ ದೊಡ್ಡ ಆಪತ್ತನ್ನು ಮೈ ಮೇಲೆ ಎಳೆದುಕೊಂಡಿದ್ದನೆನ್ನುವುದು ನಿಖಿಲ್ ಗೆ ಮಾತ್ರ ಗೊತ್ತಿತ್ತು. ಸೌಭಾಗ್ಯ ಮಾತ್ರ ಇದ್ಯಾವುದರ ಪರಿವೆ ಇಲ್ಲದೆ ಮಲಗಿದ್ದಳು. ಮನೆಗೆಲಸದವಳಿಗೆ ಹೀಗೆ ಹಾಯಾಗಿ ಮಲಗಿಸಿ, ನಿದ್ದೆ ಮಾಡಿಸಿ, ಮೈ ಕೈ ಕೂಡ ಮುಟ್ಟದೆ, ಕೈ ತುಂಬಾ ದುಡ್ಡೂ ಕೊಡ್ತಾರೆ ಎನ್ನುವುದನ್ನೇ ಮೊದಲಿಗೆ ನಂಬಲು ಕಷ್ಟವಾಗಿದ್ದ ಅವಳಿಗೆ ಇತ್ತೀಚಿಗೆ ಚೆನ್ನಾಗಿ ನಿದ್ದೆ ಬರುತ್ತಿದೆ ಎನ್ನುವುದೇ ನೆಮ್ಮದಿ ಕೊಟ್ಟಿತ್ತು.

ಎರಡು ತಿಂಗಳುಗಳ ಪರಿಶ್ರಮದಿಂದ ಕೊನೆಗೂ ನಿಖಿಲ್ ಮತ್ತು ಪ್ರಣವ್ ಸೇರಿ ಸೌಭಾಗ್ಯಳ ಮೈಂಡ್ ಮ್ಯಾಪಿಂಗ್ ಮಾಡುವಲ್ಲಿ ಯಶಸ್ವಿಯಾಗಿದ್ದರು.

ಒಂದು ದಿನ ಹೀಗೇ ಪ್ರಣವ್ ಸೌಭಾಗ್ಯಳ ದೇಹಸಿರಿಯನ್ನೂ, ತಲೆಯೊಳಗನ್ನೂ ನೋಡುತ್ತಾ ತಲೆದೂಗುತ್ತಾ, "ಅಲ್ವೋ, ನೀನು ಹೀಗೆ ಅವಳ ಮೆದುಳಿಗೇ ಕೈ ಹಾಕ್ತಾ ಇದ್ದೀಯ ಅಂತ ಅವಳಿಗೆ ಗೊತ್ತಾ?" ಎಂದು ಕೇಳಿದ.

"ಅವಳ ಮೈಂಡ್ ಮ್ಯಾಪಿಂಗ್ ಮಾಡ್ಬೇಕು ಅಂದ್ರೆ ಮೊದ್ಲು ಅವಳು ಕುಂಡಿ ಕೊಯ್ಕೊಂಡು ಹೋದ್ರೂ ಗೊತ್ತಾಗಲ್ಲ ಅಂತಾರಲ್ಲ ಅಷ್ಟು ಡೀಪ್ ಸ್ಲೀಪ್ ಗೆ ಹೋಗ್ಬೇಕು. ಅದಕ್ಕೇ ಅಂತಾನೇ ಒಂದು ಸ್ಮಾಲ್ ಡೋಸ್ ಶಾರ್ಟ್ ಆಕ್ಟಿಂಗ್ ಅನಸ್ತೇಷಿಯಾ ಕೊಟ್ಟು ನಿದ್ದೆ ಬರುಸ್ತೀನಿ" ನಿಖಿಲ್ ಒಮ್ಮೆ ಪ್ರಣವ್ ಕಡೆ ನೋಡಿ ಮತ್ತೆ ಸೌಭಾಗ್ಯ ಕಡೆ ನೋಡಿ, "ಹಾಗಾಗಿ ನಾನು ಏನೇನೆಲ್ಲಾ ನೋಡ್ತಿದೀನಿ ಅಂತ ಅವಳಿಗೆ ಗೊತ್ತಾಗಲ್ಲ" ಎಂದು ವಿವರಿಸಿದ.

"ಏಯ್ ಇದು ಮೋಸ ಅಲ್ವೇನೋ?"

"ನೋಡೋ ಅದಿಕ್ಕೆ ನಾನು ಲೋ ರಿಸ್ಕ್ ಅಂತ ಇವಳನ್ನು ಸೆಲೆಕ್ಟ್ ಮಾಡಿಕೊಂಡಿದ್ದು. ಮನೆ ಕೆಲಸ ಮಾಡೋಕೆ ಬರೋ ಇವಳದ್ದೇ ಬೇರೆ ಪ್ರಪಂಚ, ನಮ್ಮದೇ ಬೇರೆ ಪ್ರಪಂಚ. ಈ ಎರಡೂ ಪ್ರಪಂಚಗಳಲ್ಲಿ ನಮ್ಮಿಬ್ಬರಿಗೂ ಕಾಮನ್ ಆಗಿರೋ ವಿಷಯಗಳೇ ಇರಲ್ಲ, ಏನೇ ಗೊತ್ತಾದ್ರೂ

ಅದ್ರಿಂದ ತೊಂದ್ರೆ ಏನಿಲ್ಲ"
"ಹೂಂ, ನೀನು ಹೇಳೋದೂ ಸರಿ ಅನ್ನು. ಒಂದು ವೇಳೆ ಅವ್ಳಿಗೆ ಹೇಳದೇ ನೀನು ಯಾವುದಾದ್ರೂ ಮೆಮೋರಿ ಡಿಲೀಟ್ ಮಾಡಿದ್ರೆ?"
"ಸದ್ಯಕ್ಕೆ ತೆಪ್ಪನೆ ಮಲಗಿಕೊಂಡು ನಿದ್ದೆ ಹೋದ್ರೆ ದುಡ್ಡು ಸಿಗುತ್ತೆ, ಇದೆಲ್ಲಾ ಮುಗಿದ ಮೇಲೆ ಬೆಂಗಳೂರಿಗೆ ಹೋಗ್ತೀವಿ ಅನ್ನೋದಷ್ಟೇ ಮುಖ್ಯ ಅವ್ಳಿಗೆ." ನಿಖಿಲ್ ಕಂಪ್ಯೂಟರ್ ಪರದೆಯಲ್ಲಿ ತೆರೆದುಕೊಂಡಿದ್ದ ಚಿತ್ರಗಳನ್ನು ನೋಡುತ್ತಾ, ಚಿಂತೆಯಿಂದ, "ಪ್ರಣವ್, ಮೂರು ತಿಂಗಳಾಯ್ತು, ಆದ್ರೂ ನಾವಿನ್ನೂ ಬರೀ ಅವಳ ಮೆಮೋರೀಸ್ ಅನ್ನು ನೋಡಬಹುದು ಅಂತ ಪ್ರೂವ್ ಮಾಡಿದೀವಿ ಅಷ್ಟೇ, ಡಿಲೀಟ್ ಮಾಡೋಕಾಗ್ತಾ ಇಲ್ಲ. ಅದು ಸಾಧ್ಯವಾದ್ರೆ ಅಷ್ಟೇ ಸಕ್ಸಸ್ ಅನ್ನಬಹುದು."
"ಒಂದು ಕೆಲಸ ಮಾಡೋಣ, ಮೆಮೋರಿ ಡಿಲೀಟ್ ಮಾಡೋ ಬದ್ಲು ಎಲ್ಲಾದ್ರೂ ಡಂಪ್ ಮಾಡಿದ್ರೆ?" ಪ್ರಣವ್ ತನ್ನ ಯೋಜನೆಯನ್ನು ಮುಂದಿಟ್ಟ.
"ಮತ್ತೆ ನಿನ್ನ ತರಲೆ ಶುರು ಮಾಡಿದ್ಯಾ?"
"ಟ್ರೈ ಮಾಡೋ ನೋಡೋಣ, ಕಮ್ ಆನ್ ... "
"ನಿನ್ ತಲೆ! ಎಲ್ಲಿ ಅಂತ ಡಂಪ್ ಮಾಡೋದು?"
"ನಿನ್ ತಲೆ!"
"ಏನು?"
"ಹೂಂ, ನಾಳೆ ಇನ್ನೊಂದು ಚಿಪ್ ಕದ್ದುಕೊಂಡು ಬರ್ತೀನಿ, ನೀನೂ ಮಲಕ್ಕೊಂಡು ಇದನ್ನೆಲ್ಲಾ ನಿನ್ ತಲೆಗೆ ಅಂಟಿಸ್ಕೊ... " ಪ್ರಣವ್ ಕಣ್ಣುಗಳು ಕುತಂತ್ರಿಯಂತೆ ಹೊಳೆದವು.
"ಲೋ ಏನೋ ಆಗಿದೆ ನಿಂಗೆ? ಯಾಕೋ ಇಷ್ಟೆಲ್ಲಾ ರಿಸ್ಕ ತಗೋತಿದೀಯಾ?" ಎಂದು ಗದರಿಸಿದರೂ ನಿಖಿಲನ ಬಳಿ ಹೆಚ್ಚು ಆಯ್ಕೆಗಳಿರಲಿಲ್ಲ.
***
ಮತ್ತೆ ಮೂರು ತಿಂಗಳುಗಳ ನಂತರ ಪ್ರಣವ್ ಮತ್ತು ನಿಖಿಲ್ ಟೆರೇಸಿನಲ್ಲಿ ಕುಳಿತು ಬಿಯರ್ ಕುಡಿಯುತ್ತಾ, "ಅಬ್ಬಾ, ಅಂತೂ ಬೇಡವಾದ ಮೆಮೋರಿನ ಸೌಭಾಗ್ಯ ತಲೆಯಿಂದ ಹೊರಗೆ ತೆಗಿಬಹುದು ಅಂತ ಪ್ರೂವ್ ಮಾಡಿದ್ವಿ. ಇನ್ನು ಹೀಗೆ ಹೊರಗೆ ತೆಗೆದು ನಿನ್ನ ತಲೆಯಲ್ಲಿ ತುಂಬಿದ ಮೆಮೋರಿಗಳನ್ನು ಏನ್ ಮಾಡೋದು ಅಂತ? ಅದೇನೇನು ನೆನಪುಗಳುಗಳನ್ನು ತೆಗಿತಿದಾಳೋ ಏನೋ? ಹೀಗೆ ಬಿಟ್ರೆ ನಿನ್ನ ತಲೆ ಗೊಬ್ಬರದ ಗುಂಡಿ ಆಗುತ್ತೆ. ಛೇ!"
"ಅಬ್ಬಾ ನನ್ನ ಮೇಲೆ ಅಷ್ಟೊಂದು ಕನ್ಸರ್ನ್ ಇದ್ರೆ ನಿನ್ ತಲೇನೆ ಕೊಡು, ನೋಡೋಣ" ನಿಖಿಲ್ ತಗಾದೆ ತೆಗೆದ.
"ನೋಡೋ, ನಾನು ಪ್ರಾಣ ಸ್ನೇಹಿತ, ಬೇಕಾದ್ರೆ ಪ್ರಾಣ ತಗೋ, ತಲೆ ಮಾತ್ರ ಕೇಳ್ಬೇಡ ಗುರೂ... "
"ಹೂಂ ನನ್ನ ಹಣೆಬರಹ ನೋಡು, ಒಂದು ಕಹಿ ನೆನಪನ್ನು ಮರೆಯೋಣ ಅಂದ್ರೆ ಬೇರೆಯವ್ರ ನೂರೆಂಟು ಕಹಿ ನೆನಪುಗಳನ್ನು, ನನ್ನ ತಲೆಗೆ ತುಂಬಿಕೊಳ್ಳೋ ಹಾಗಾಯ್ತು" ಎನ್ನುತ್ತಾ ನಿಖಿಲ್

ಬೇಸರದಿಂದ ತನ್ನ ಡ್ರಿಂಕ್ ಅನ್ನು ಗಟಗಟ ಕುಡಿದು, ಮುಖವನ್ನೆಲ್ಲಾ ಕಹಿಯಾಗಿ ಹಿಂಡಿಕೊಳ್ಳುತ್ತಾ ಕುಳಿತ.

"ಒಂದು ಐಡಿಯಾ!" ತನ್ನ ಘನಂದಾರಿ ಐಡಿಯಾವನ್ನು ಕೇಳಿಸಿಕೊಳ್ಳಲು ನಿಖಿಲ್ ಯಾವ ಉತ್ಸಾಹವನ್ನೂ ತೋರುತ್ತಿಲ್ಲವೆಂದರೂ ಪ್ರಣವ್ ಉತ್ಸುಕತೆಯಿಂದ ಮುಂದುವರೆಸಿದ. "ಮೊದಲನೇದಾಗಿ ನಮಗೆ ಕಾನ್ಸೆಪ್ಟ್ ಪ್ರೂವ್ ಮಾಡಬೇಕು, ಅದು ಹೆಚ್ಚು ಕಡಿಮೆ ಆದಂಗೇ ಅಂತಿಟ್ಕೋ. ಎರಡನೇದು ನಿನ್ನ ತಲೆಯಿಂದ ಒಂದು ಮೆಮೋರಿನ ಹೊರಗೆ ಹಾಕ್ಬೇಕು. ಅದನ್ನು ಸೌಭಾಗ್ಯ ತಲೆಗೇ ಹಾಕಿಬಿಡು, ಹೇಗೂ ನಿಮ್ಮಿಬ್ಬರ ನಡುವೆ ಕಾಮನ್ ಏನೂ ಇಲ್ದೆ ಇರೋದ್ರಿಂದ ಅದು ಅವ್ಳಿಗೆ ಒಂದು ಕೆಟ್ಟ ಕನಸು ಅನ್ನಿಸುತ್ತೆ ಹೊರತು ಬೇರೆ ಯಾವ ರೀತೀಲೂ ಕಾಡೋದಿಲ್ಲ, ಅಲ್ವ?"

ಪ್ರಣವನ ಮಾತುಗಳಿಂದ ಮೊದಲು ಸಮಾಧಾನಗೊಳ್ಳದಿದ್ದರೂ, ನಿಖಿಲ್ ನಿಧಾನವಾಗಿ ಯೋಚಿಸಿ, "ಹೂಂ ನೀನು ಹೇಳೋದೂ ಸರಿ, ಮುಂದೆ ನೋಡೋಣ, ಯಾರಿಗಾದ್ರೂ ಡಿಮೆನ್ಷಿಯಾ ಇರೋವ್ರನ್ನ ಕರೆದುಕೊಂಡು ಬಂದು ಟ್ರೈ ಮಾಡಬೋದು ಅಲ್ವ?" ಎಂದು ಕೇಳಿದ.

"ಹೂಂ ನೋಡು ಇನ್ನೂ ಯಾರ್ ಯಾರನ್ನು ಅಬ್ಯೂಸ್ ಮಾಡ್ತಿಯಾ ಅಂತ"

ತನ್ನ ಮಾತುಗಳಿಂದ ಪೆಚ್ಚಾದ ನಿಖಿಲನನ್ನು ನೋಡಿ, "ತಮಾಷೆ ಮಾಡಿದೆ ಕಣೋ" ಎಂದು ಕವರ್ ಅಪ್ ಮಾಡಲು ನೋಡಿದ.

***

ಅಂದು ಬೆಂಗಳೂರಿನಿಂದ ಪ್ರಣವ್ ನಿಖಿಲನ ಮಕ್ಕಳನ್ನು ಜೊತೆಗೆ ಕರೆದುಕೊಂಡು ಬಂದ. ಬಹಳ ದಿನಗಳ ನಂತರ ಅಪ್ಪನನ್ನು ನೋಡಿ ಮಕ್ಕಳು ಕುಣಿದಾಡಿದರು. ಮೊಮ್ಮಕ್ಕಳನ್ನು ನೋಡಿ ಗೌಡರಿಗೆ ಬಹಳ ಖುಷಿಯಾಯಿತು. "ಏನ್ರೋ, ಇಷ್ಟು ದಿನ ಮಾಡಿದ್ರುಲ್ಲೋ ನಿಮ್ಮ ಅಜ್ಜನ ಮನೆಗೆ ಬರೋಕೆ? ನಿಮ್ಮಮ್ಮ ಬರಲಿಲ್ವ? ಎಷ್ಟನೇ ಕ್ಲಾಸ್ ನೀವೀಗ?" ಎಂದು ಒಟ್ಟಿಗೇ ಎಲ್ಲಾ ಪ್ರಶ್ನೆಗಳನ್ನು ಕೇಳಿದರು.

"ಅಜ್ಜಾ, ನಾನೀಗ ಎಂಟನೇ ಕ್ಲಾಸ್ ಪಾಸಾಗಿ ಒಂಭತ್ತು, ಅಣ್ಣ ಒಂಭತ್ತು ಪಾಸಾಗಿ ಎಸ್‌ಎಸ್‌ಎಲ್ಸಿ. ಅಮ್ಮಂಗೆ ಆಫೀಸ್ ಇರತ್ತಲ್ವಾ ಬರ್ಲಿಲ್ಲ. ನಾವಿಬ್ಬರೂ ಬೇಸಿಗೆ ರಜೆ ಕಳೆಯುವವರೆಗೂ ಇಲ್ಲೇ ಇರ್ತೀವಿ" ಎಂದು ಹೇಳಿದ. ಅಷ್ಟರಲ್ಲಿ ಮೇಲಿನಿಂದ ಇಳಿದು ನಿಖಿಲ್ ಮಕ್ಕಳ ಬಳಿ ಓಡಿಬಂದ.

"ಅಪ್ಪ ನಿನ್ ಕೆಲಸ ಇನ್ನೂ ಮುಗಿದಿಲ್ವಾ?"

"ಇನ್ನೇನು ಮುಗಿಯುತ್ತೆ ಪುಟ್ಟ"

"ಅಪ್ಪ ನೀನೂ, ಅಮ್ಮನೂ ಡೈವೋರ್ಸ್ ಆಗ್ತಿದೀರಾ?"

ಈ ಪ್ರಶ್ನೆಗೆ ತತ್ತರಿಸಿದ ನಿಖಿಲ್, "ಅಯ್ಯೋ ಯಾರೋ ಹಾಗೆ ಹೇಳಿದ್ದು?" ಎಂದು ಗದರಿಸಿದನು.

ಮೊದಲು ಪ್ರತಿ ದಿನ ಹೆಂಡತಿಗೆ ಫೋನ್ ಮಾಡಿ ವಿಚಾರಿಸಿಕೊಳ್ಳುತ್ತಿದ್ದ ನಿಖಿಲ್, ಇತ್ತೀಚಿಗೆ

ತಾನು ಮೂರು ನಾಲ್ಕು ದಿನವಾದರೂ ಫೋನ್ ಮಾಡುವುದನ್ನೇ ಮರೆತು ಹೋಗುತ್ತಿದ್ದ.
"ಅಪ್ಪ ನೀನೇ ಯಾಕೆ ಬರ್ಲಿಲ್ಲ ನಮ್ಮನ್ನು ಕರ್ಕೊಂಡು ಬರೋಕೆ?" ಎಂದೆಲ್ಲಾ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳುತ್ತಿದ್ದ ಮಕ್ಕಳನ್ನು ನಿಖಿಲ್, "ಬನ್ನಿ ಮೊದ್ಲು ಕ್ರಿಕೆಟ್ ಆಡೋಣ" ಎಂದು ಕರೆದೊಯ್ದನು.
ಬೆಂಗಳೂರಿನಲ್ಲಿ ತಮ್ಮ ಸ್ಕೂಲಿನ ಕ್ಯಾಂಪಸ್ ಮತ್ತು ಅಪಾರ್ಟ್ಮೆಂಟಿನ ಸಮತಟ್ಟಾದ ಫೀಲ್ಡ್ ನಲ್ಲಿ ಆಡಿದ್ದ ಮಕ್ಕಳಿಗೆ, ಮಾವಿನ ಮರ ಒಂದು ಅಡಚಣೆಯೇ ಅನಿಸಿ, ಕ್ರಿಕೆಟ್ ಫೀಲ್ಡ್ ಅಷ್ಟೇನೂ ಖುಷಿ ಕೊಡಲಿಲ್ಲ. ತನಗಿರುವ ಬಾಲ್ಯದ ನೆನಪುಗಳು ಮಕ್ಕಳಿಗೂ ಇದ್ದಿದ್ದರೆ ಖಂಡಿತ ಅವರಿಗೂ ಇದು ಇಷ್ಟವಾಗುತ್ತಿತ್ತು, ಎಂದು ಮನದಲ್ಲೇ ಯೋಚಿಸಿದ ನಿಖಿಲ್ ಗೆ ಮೊದಲ ಬಾರಿಗೆ ನೆನಪುಗಳು ಬರೀ ನೋವು ಕೊಡುವುದಿಲ್ಲ, ಖುಷಿಯನ್ನೂ, ಪ್ರತಿ ಕ್ಷಣಕ್ಕೂ ಅರ್ಥವನ್ನೂ ಕೊಡುತ್ತವೆನ್ನುವುದು ಮನವರಿಕೆಯಾಯಿತು.
"ಅಪ್ಪಾ ಇಲ್ಲಿ ಎಷ್ಟೊಂದು ಎಲೆಗಳು ಬಿದ್ದಿವೆ, ಹೆಂಗೆ ಆಡೋದು?" ದೊಡ್ಡ ಮಗ ದೂರಿದನು.
ಅಲ್ಲೇ ಇದ್ದ ಸೂರಿ, ನಿಖಿಲ್ ಹೇಳುವ ಮೊದಲೇ ಕಡ್ಡಿ ಪೊರಕೆ ತಂದು ಸರಸರನೆ ಗುಡಿಸಿ ಎಲೆಗಳನ್ನು ಒಂದು ಮೂಲೆಗೆ ದೂಡಿದನು. ಮಕ್ಕಳು ಆಡಲು ಶುರು ಮಾಡಿದ ಸ್ವಲ್ಪ ಹೊತ್ತಿಗೇ ಮತ್ತೆ ಎಲೆಗಳು ಉದುರಿದುವು. ಮತ್ತೆ ಮುಖ ಇಳಿಬಿಟ್ಟ ಮಕ್ಕಳ ಮುಖವನ್ನು ನೋಡಿ ಸೂರಿ ಬೇಸರಿಸಿಕೊಳ್ಳದೆ ಇನ್ನೊಮ್ಮೆ ಕಸ ಗುಡಿಸಿದ.
ಅವನಿಗೂ ಬ್ಯಾಟಿಂಗ್ ಮಾಡುವಂತೆ ನಿಖಿಲ್ ಕರೆದಾಗ ಮೊದಲು ಸಂಕೋಚದಿಂದ ದೂರ ನಿಂತಿದ್ದವನು, ನಿಧಾನವಾಗಿ ಆಡತೊಡಗಿದನು. ಅದೇ ವೇಳೆಗೆ ಹೊರಗೆ ಬಂದು ಜಗುಲಿ ಮೇಲೆ ಕುಳಿತ ಅಪ್ಪ ಕಣ್ಣು ತುಂಬಿಕೊಂಡಿದ್ದನು ನೀಖಿಲ್ ಗಮನಿಸಿದ!
"ಸೂರಿ, ಬೇಕಾದ್ರೆ ನಿನ್ನ ಫ್ರೆಂಡ್ಸ್ ನ ಕರ್ಕೊಂಡು ಬಾ, ಮ್ಯಾಚ್ ಆಡೋಣ"
"ಹೂಂ, ಚೆನ್ನಾಗಿ ಪ್ರಾಕ್ಟೀಸ್ ಮಾಡಿ ಮುಂದಿನ ಭಾನುವಾರ ಫೈನಲ್ ಮ್ಯಾಚ್ ಇಟ್ಕೋಳೋಣ"
"ಅಯ್ಯೋ ಬೇಡ, ಅವತ್ತು ನಮ್ಮಪ್ಪನ ತಿಥಿ" ಸೂರಿ ಸಂಕೋಚದಿಂದ ಹೇಳಿದ.
"ಓಹ್, ಸರಿ" ಎಂದಷ್ಟೇ ಹೇಳಿದ ನಿಖಿಲ್, ಊರಿನ ಜನ ಹೇಳುವಂತೆ ಸೌಭಾಗ್ಯ ತನ್ನ ಮಗನ ತಂದೆ ಬದುಕಿದ್ದರೂ ತಿಥಿ ಮಾಡ್ತಾಳೇನೋ? ಅಥವಾ ಅವಳ ಗಂಡನೇ ಸೂರಿಯ ಅಪ್ಪ ಇರಬಹುದೇ ಎಂದೆಲ್ಲ ಯೋಚಿಸುತ್ತಾ ಬೌಲಿಂಗ್ ಮಾಡಿದ.
***
ಎಂದಿನಂತೆ ಸಂಜೆ ನಿಖಿಲನ ಕೋಣೆಗೆ ಬಂದ ಸೌಭಾಗ್ಯ ಯಾಕೋ ಸಪ್ಪಗಿದ್ದಳು. "ಏನಾಯ್ತು?" ನಿಖಿಲ್ ವಿಚಾರಿಸ್ಕೊಂಡ. ಅಲ್ಲೇ ಇದ್ದ ಪ್ರಣವ್ ಬೇಕೆಂತಲೇ ಇಂಗ್ಲೀಷ್ ನಲ್ಲಿ, "ವೈ ಈಸ್ ಶಿ ಆಲ್ವೇಸ್ ಇನ್ ಗ್ರೀಫ್ ಬ್ರೋ!" ಎಂದು ರೇಗಿಸಿದ.
"ಏನಿಲ್ಲ, ಬೇಡಾ ಅಂದ್ರೂ ಏನೇನೋ ನೆನಪಾಗ್ತ ಇರ್ತವೆ, ಸೂರಿ ಅಪ್ಪನ ತಿಥಿ ಹತ್ರ ಬಂತು" ಎಂದು ಸೌಭಾಗ್ಯ ದೀರ್ಘವಾಗಿ ನಿಟ್ಟುಸಿರು ಬಿಟ್ಟು ಮಲಗಿದಳು. ಅವಳಿಗೆ ಅನಸ್ತೇಷಿಯಾ

ಕೊಡುವ ಮೊದಲು ನಿಖಿಲ್, "ಸರಿ, ನಿಂಗೆ ತುಂಬಾ ನೋವು ಕೊಡೋ ನೆನಪನ್ನೇ ನೆನೆಸಿಕೊಳ್ತಾ ಮಲ್ಕೋ, ಅದನ್ನೇ ಪದೇ ಪದೇ ಕಣ್ಣು ಮುಂದೆ ತಂದುಕೋ" ಎಂದು ವಿವರಿಸಿದ. ಸ್ವಲ್ಪ ಹೊತ್ತಿಗೆ ಸೌಭಾಗ್ಯ ನಿದ್ದೆ ಹೋದ ಕೂಡಲೇ, ಅವಳ ಪಕ್ಕದಲ್ಲಿ ಕುಳಿತು ತನ್ನ ತಲೆಗೂ ಅಂಥದ್ದೇ ಚಿಪ್ ಮತ್ತು ಕೇಬಲ್ ಗಳನ್ನೂ ಸಿಕ್ಕಿಸಿಕೊಂಡು, ಶಾರ್ಟ್ ಆಕ್ಟಿಂಗ್ ಅನಸ್ತೇಶಿಯಾ ತೆಗೆದುಕೊಂಡು, ಪ್ರಣವನ ಸಹಾಯದಿಂದ ಅವಳ ಮೆಮೋರಿಯನ್ನು ತನ್ನ ತಲೆಗೆ ಟ್ರಾನ್ಸ್ಫರ್ ಮಾಡಿಕೊಳ್ಳಲು ಸಿದ್ದನಾಗಿ ಮಲಗಿದ. ಸುಮಾರು ಹೊತ್ತಿನ ಬಳಿಕ ಸೌಭಾಗ್ಯ ನಿರಾಳವಾಗಿ ಎದ್ದು ಹೊರಟು ಹೋದಳು. ಪ್ರಣವನಿಗೆ ಅಂದೇಕೋ ಈ ಸೌಭಾಗ್ಯ ಯಾವ ನೆನಪನ್ನು ಮರೆಯಲು ಪ್ರಯತ್ನಿಸಿರಬಹುದೆಂದು ತಿಳಿದುಕೊಳ್ಳುವ ಕೆಟ್ಟ ಕುತೂಹಲವಾಯಿತು. ನಿಖಿಲ್ ಇನ್ನೂ ಗಾಢ ನಿದ್ರೆಯಲ್ಲೇ ಇದ್ದ. ಪ್ರಣವ ಹೆಚ್ಚು ಸಮಯ ಹಾಳು ಮಾಡದೆ, ಅವನ ನೆನಪನ್ನು ಪರದೆಯ ಮೇಲೆ ಹಾಕಿ ನೋಡತೊಡಗಿದ.

ಸೂರಿ, 'ನಮ್ಮಪ್ಪ ಯಾರು ಹೇಳಮ್ಮಾ' ಎಂದು ಅವಳನ್ನು ಕೇಳುತ್ತಿದ್ದುದ್ದನ್ನು ನೋಡುತ್ತಾ ನೋಡುತ್ತಾ ಅವನ ಕಾಲುಗಳು ನಡುಗತೊಡಗಿದವು. ಹಾಗೇ ಕಿಟಕಿಯಿಂದ ಇಣುಕಿದಾಗ ಅಂಗಳದಲ್ಲಿ ಮಕ್ಕಳೊಂದಿಗೆ ಆಡುತ್ತಿದ್ದ ಸೂರಿ ಹೆಚ್ಚು ಕಡಿಮೆ, ನಿಖಿಲ್ ಹಾಗೇ ಕಾಣತೊಡಗಿದನು!

ಗಾಬರಿ ಬಿದ್ದ ಪ್ರಣವ್ ಇನ್ನು ಇಲ್ಲಿರುವುದು ಕಷ್ಟವೆಂದು, ನಿಖಿಲ್ ಎದ್ದೇಳುವ ಮೊದಲೇ ಊರಿನಿಂದ ಜಾಗ ಖಾಲಿ ಮಾಡಿದನು. ಎಚ್ಚರವಾದಾಗ ನಿಖಿಲ್ ಗೆ ಪ್ರಣವ್ ಹಾಗೆ ಹೇಳದೇ ಕೇಳದೇ ಓಡಿ ಹೋಗಿದ್ದೇಕೆಂದು ಅರ್ಥವಾಗಲಿಲ್ಲ. ಅವನ ಫೋನ್ ಕೂಡ ಸ್ವಿಚ್ ಆಫ್ ಆಗಿತ್ತು. ಬಹಳ ಹೊತ್ತು ತಲೆಕೆಡಿಸಿಕೊಂಡ ಮೇಲೆ, ಬಹುಶಃ ಅವನು ಸೌಭಾಗ್ಯಳಿಂದ ನನ್ನ ತಲೆಗೆ ಬಂದ ಮೆಮೋರಿಯನ್ನು ನಾನು ಮಲಗಿದ್ದಾಗ ನೋಡಿರಬಹುದೇ ಎನ್ನುವ ಅನುಮಾನ ಬಂತು. ತಕ್ಷಣ ಕಣ್ಣು ಮುಚ್ಚಿಕೊಂಡು ಸೌಭಾಗ್ಯಳಿಗೆ ಸಂಬಂಧಿಸಿದ ನೆನಪುಗಳನ್ನೆಲ್ಲಾ ಕೆದಕಿದ. ಬಹಳ ಹೊತ್ತು ತಿಣುಕಿದ ಮೇಲೆ ತನ್ನ ಕಣ್ಣುಗಳ ಮುಂದೆ ಸುಳಿದು ಹೋದ ನೆನಪು, ಪ್ರಣವ್ ಹೆದರಿ ಓಡುವಂತೆ ಮಾಡಿದ ನೆನಪು ಯಾವುದೆಂದು ಗೊತ್ತಾಯಿತು. ಅವನ ಇಡೀ ದೇಹವೆಲ್ಲಾ ಸಿಟ್ಟಿನಿಂದ ಕಂಪಿಸತೊಡಗಿತು. ದಡದಡನೆ ಕೆಳಗಿಳಿದು ಬಂದವನೇ, "ಅಪ್ಪಾ, ಅಪ್ಪಾ... " ಎಂದು ಚೀರುತ್ತಾ ಅಪ್ಪನನ್ನು ಹುಡುಕಿದ.

ಜಗುಲಿ ಮೇಲೆ ಕುಳಿತಿದ್ದ ಅಪ್ಪನಿಗೆ ಸೌಭಾಗ್ಯ ಹಸನ್ಮುಖಿಯಾಗಿ ಕಾಫಿ ಕೊಡುತ್ತಿದ್ದಳು. ಅವಳ ಮುಖದಲ್ಲಿದ್ದ ನೋವು, ಸಿಟ್ಟು ಮಾಯವಾಗಿತ್ತು. ಅಪ್ಪ ಅಚ್ಚರಿಯಿಂದ ಅವಳನ್ನೇ ನೋಡುತ್ತಿದ್ದರು. ಗಂಟಲು ಹರಿದುಹೋಗುವಂತೆ ಸಿಟ್ಟಿನಿಂದ ಕೂಗುತ್ತಿದ್ದ ಮಗನ ದನಿ ಅವರಿಗೆ ಕೇಳಿಸಲೇ ಇಲ್ಲ. ಇಷ್ಟು ವರ್ಷಗಳಲ್ಲಿ ಅವಳು ಎಂದೂ ಹೀಗೆ ನಡೆದುಕೊಂಡಿದ್ದನ್ನು ನೋಡಿರದ ನಿಖಿಲ್ ತನ್ನೆದುರು ನಡೆಯುತ್ತಿರುವುದು ನಿಜವೇ ಎಂದು ತಲೆಕೆಡಿಸಿಕೊಂಡು ನಿಂತು ಬಿಟ್ಟ!

ಸೂರಿ ಅದೇ ಸಮಯಕ್ಕೆ ಸೌಭಾಗ್ಯನ ಹಿಂದೆ ಅಳುಕುತ್ತಾ ನಿಂತು, "ಅಮ್ಮ ಇದೊಂದು ಸಲ ಅಪ್ಪನ ತಿಥಿನ ಮುಂದಿನ ಸೋಮವಾರ ಮಾಡಬೋದ? ಭಾನುವಾರ ನಾವು ಮ್ಯಾಚ್ ಆಡ್ಬೇಕು" ಎಂದು ಗೋಗರೆಯತೊಡಗಿದ.

ಸೌಭಾಗ್ಯ ಗಾಬರಿಯಿಂದ, ಏನೂ ಹೇಳಲು ಗೊತ್ತಾಗದೆ, "ಅಪ್ಪನ ತಿಥೀನ?" ಎಂದು ಕೇಳಿ ಎಷ್ಟು ಪ್ರಯತ್ನ ಪಟ್ಟರೂ ಸೂರಿ ಹೇಳುತ್ತಿರುವುದೇನೆಂದು ನೆನಪಿಸಿಕೊಳ್ಳಲು ಆಗದೆ ಮಂಕಾಗಿ ನಿಂತುಬಿಟ್ಟಳು!

***

ಇತ್ತ ಹೇಳದೇ ಕೇಳದೇ ಊರು ಬಿಟ್ಟ ಪ್ರಣವನ ಮೇಲೆ ಬಹಳ ಸಿಟ್ಟು ಬರುತ್ತಿದ್ದರೂ ಇಂಥ ಸಮಯದಲ್ಲಿ ಸಂಯಮದಿಂದ ವರ್ತಿಸಬೇಕೆಂದು, ನಿಖಿಲ್ ತನ್ನ ಕೋಣೆಗೆ ಬಂದು, ಅವನಿಗೊಂದು ಇಮೇಲ್ ಬರೆದ.

"ನಮ್ಮ ಮಿಷನ್ ಸಕ್ಸಸ್ ಆಗಿದೆ. ಅದ್ಯಾವ ನೆನಪನ್ನು ತಲೆಯಿಂದ ತೆಗೆದು ಹಾಕಿದಳೋ ಏನೋ ಅಂತೂ ಸೌಭಾಗ್ಯ ಖುಷಿಯಿಂದಿದ್ದಾಳೆ. ಬೇಗ ಬಾ" ಎಂದು ಬರೆದ. ಅವನು ಎಣಿಸಿದ್ದಂತೆ ಪ್ರಣವ್ ಮರುದಿನ ಬಂದಿಳಿದ. ಅವನ ಹಾವ ಭಾವದಿಂದಲೇ ಅವನ ಕಳ್ಳಾಟವನ್ನು ಹಿಡಿದ ನಿಖಿಲ್ ಗೆ ಅವನು ಸೌಭಾಗ್ಯಳ ನೆನಪನ್ನು ನೋಡಿರುವುದು ಖಚಿತವಾಯಿತು. ಆದರೆ ಅದನ್ನು ತೋರಿಸದೆ, ಮೇಲಿನ ಕೋಣೆಗೆ ಕರೆದೊಯ್ದು ಬಾಗಿಲು ಹಾಕಿದ. ಕೂಡಲೇ ಎಚ್ಚೆತ್ತುಕೊಂಡ ಪ್ರಣವ್ "ಯಾಕೋ ಬಾಗಿಲು ಹಾಕ್ತಿದೀಯ?" ಎಂದು ಕೇಳಿದಾಗ, ಒಮ್ಮೆಲೇ ಅವನ ಮೇಲೆರಗಿದ ನಿಖಿಲ್, "ಹಲ್ಕಾ ನನ್ನ ಮಗನೆ, ನಾನು ಮಲಗಿದ್ದಾಗ ನನ್ನ ನೆನಪನ್ನು ಕದ್ದು ನೋಡಿದೀಯಾ? ಈಗ ಅದನ್ನ ನಿನ್ನ ತಲೆಯಿಂದ ತೆಗೆದು ಹಾಕೋ ತನಕ ನಿನ್ನನ್ನು ಹೋಗೋಕ್ ಬಿಡಲ್ಲ" ಎಂದು ಮೂತಿಗೆ ಹೊಡೆದನು. ಅನಿರೀಕ್ಷಿತ ದಾಳಿಗೆ ತತ್ತರಿಸಿದ ಪ್ರಣವ್, "ಏಯ್ ಏನೋ ಹೇಳ್ತಿದೀಯಾ? ನಾನು ಏನೂ ನೋಡಿಲ್ಲ ಕಣೋ" ಎಂದು ಬೇಡಿಕೊಂಡ.

"ಹಾಗಿದ್ರೆ ಯಾಕೆ ಓಡ್ಹೋದೆ ಹೇಳು?" ಎಂದು ಮತ್ತೊಮ್ಮೆ ಕಪಾಳ ಮೋಕ್ಷ ಮಾಡಿದ.

ಇನ್ನು ಹೆಚ್ಚು ಹೋರಾಡಿ ಫಲವಿಲ್ಲವೆಂದರಿತ ಪ್ರಣವ್, "ಲೇ ನಿಂಗೆ ಎಂಬೆರಾಸ್ ಆಗಬಾರದು ಅಂತ ಹೋದೆ ಕಣೋ" ಎಂದು ತಪ್ಪೊಪ್ಪಿಕೊಂಡ.

"ಹೂಂ ಕಣೋ, ನಮ್ಮಪ್ಪನೇ ಸೌಭಾಗ್ಯನ್ನ ರೇಪ್ ಮಾಡಿರೋದು, ಗೊತ್ತಾಯ್ತಾ? ಆ ಸೂರಿ ನಮ್ಮಪ್ಪನಿಗೇ ಹುಟ್ಟಿರೋನು. ಏನೀಗ? ಅದು ನಂಗೆ ನಮ್ಮಪ್ಪನಿಗೆ ಸಂಬಂಧಿಸಿದ ಮೆಮೋರಿ. ನೀನ್ಯಾಕೋ ನೋಡಿದೆ?" ತಾನು ಕೋಪದಿಂದ ಕಿರುಚುತ್ತಿರುವುದು ಕೆಳಗಿರುವವರಿಗೆ ಕೇಳಿಸಬಹುದೆನ್ನುವುದನ್ನೂ ಮರೆತು ನಿಖಿಲ್ ಕೂಗುತ್ತಿದ್ದ.

"ಹೇ ಯಾಕೋ ಹಿಂಗಾಡ್ತಿದೀಯಾ? ನಾನು ಅದನ್ನು ಯಾರಿಗೂ ಹೇಳಲ್ಲ ಕಣೋ, ಪ್ಲೀಸ್ ನನ್ನ ಬಿಟ್ಬಿಡು"

"ಸಾಧ್ಯವೇ ಇಲ್ಲ, ನೀನೀಗ ಆ ಮೆಮೋರಿನ ನಿನ್ನ ತಲೆಯಿಂದ ತೆಗೆದು ಹಾಕಲೇ ಬೇಕು, ಬಾ ತೆಪ್ಪಗೆ ಮಲಕ್ಕೋ, ನಿಂಗೆ ಶಾರ್ಟ್ ಆಕ್ಟಿಂಗ್ ಅನಸ್ತೇಷಿಯಾ ಕೊಡ್ತೀನಿ." ಎಂದು ಕೂಗುತ್ತಾ

ಜಗ್ಗಾಟದಿಂದ, ಹೊಡೆದಾಟದಿಂದ ಬೆವೆತು ನೀರಿಳಿಯುತ್ತಿದ್ದ ನಿಖಿಲ್ ಪ್ರಣವನನ್ನು ಮಂಚದ ಮೇಲೆ ದೂಡಿದ.
"ನೋ, ನಾನು ಯಾವುದೇ ಕಾರಣಕ್ಕೂ ನನ್ನ ಮೆಮೋರಿಗೆ ಆಕ್ಸೆಸ್ ಕೊಡಲ್ಲ, ಯಾವ್ದೋ ಡಿಲೀಟ್ ಮಾಡೋಕೋಗಿ ಇನ್ಯಾವುದೋ ಡಿಲೀಟ್ ಆಗಿ ನಂಗೆ ತೊಂದ್ರೆ ಆದ್ರೆ ನಾನೇನೋ ಮಾಡ್ಲಿ?" ಎಂದು ಎದ್ದು ನಿಖಿಲ್ ಗೆ ಜೋರಾಗಿ ಕಪಾಳಕ್ಕೆ ಬಿಗಿದ.
"ನೀನು ಕದ್ದು ಚಿಪ್ ತಂದುಕೊಟ್ಟಿದೀಯ ಅಂತ ನಾನೇ ಬಾಸ್ ಗೆ ಹೇಳ್ತೀನಿ" ಎನ್ನುತ್ತಾ ನಿಖಿಲ್ ಪ್ರಣವನನ್ನು ಕಾಲಿನಿಂದ ಝಾಡಿಸಿದ.
"ಹೇಳ್ಕೋ ಹೋಗೋ. ನೀನೇನು ಕಮ್ಮಿ ಪಾಪ ಮಾಡಿದೀಯ? ಪಾಪ ಆ ಹೆಂಗಸನ್ನ ನಿಮ್ಮಪ್ಪ ರೇಪ್ ಮಾಡಿದ್ದು ಸಾಲದು ಅಂತ ನೀನೂ ಅಬ್ಯೂಸ್ ಮಾಡ್ತಿದೀಯಾ ಹಾಳಾದೋನೆ. ಅಷ್ಟಕ್ಕೂ ಈಗ ಅವ್ಳು ನಿಂಗೆ ಚಿಕ್ಕಮ್ಮ ಆಗ್ಬೇಕು, ಆ ಸೂರಿ ನಿನ್ನ ತಮ್ಮ ಆಗ್ಬೇಕು ತಿಳ್ಕೋ" ನೆಲಕ್ಕೆ ಬಿದ್ದ ಪ್ರಣವ್ ಅಲ್ಲಿ ಸಿಕ್ಕ ಮಜ್ಜಿಗೆಯ ತಂಬಿಗೆಯನ್ನು ಇವನೆಡೆಗೆ ಬೀಸಿದ. ಅದು ಗೋಡೆ ಮೇಲಿದ್ದ ಟಿವಿ ಸ್ಕ್ರೀನ್ ಗೆ ಬಡಿದು ಟಿವಿ ಫಳ್ ಅಂತ ಒಡೆಯಿತು.
"ನೋ, ಐ ಯಾಮ್ ನಾಟ್ ಎ ಬ್ಯಾಡ್ ಮ್ಯಾನ್ ಲೈಕ್ ಮೈಫಾದರ್, ಪ್ಲೀಸ್ ಡೋಂಟ್ ಸೇ ದಟ್" ನಿಖಿಲ್ ಅಳತೊಡಗಿದನು.
"ಹೇ ಅಳಬೇಡ ಕಣೋ, ಇದೆಲ್ಲಾ ... " ಪ್ರಣವ್ ಸಮಾಧಾನ ಮಾಡಲು ಯತ್ನಿಸಿದ.
"ಇದೆಲ್ಲಾ ನಿನ್ನಿಂದಾನೇ ಆಗಿದ್ದು, ನಾನು ಕೆಲಸ ಬಿಟ್ಟು ತೆಪ್ಪನೆ ಮನೇಲಿದ್ದೆ ತಾನೇ? ಯಾಕೋ ಬಂದೆ ನೀನು?" ನಿಖಿಲ್ ಮತ್ತೆ ಅವನನ್ನು ದೂರ ತಳ್ಳಿದ.
"ನಿಖಿಲ್, ವಿ ಆರ್ ವಾಟ್ ವಿ ಆರ್ ಬಿಕಾಸ್ ಆಫ್ ಅವರ್ ಮೆಮೋರೀಸ್, ವಿ ಶುಡ್ ನಾಟ್ ಹ್ಯಾವ್ ಸ್ಟಾರ್ಟೆಡ್ ದಿಸ್. ಎನಿವೇಸ್, ಸೌಭಾಗ್ಯ ಈಗ ಆ ಕೆಟ್ಟ ನೆನಪನ್ನು ಮರೆತಿದಾಳೆ ತಾನೇ? ಸಾಕು ಕಣೋ ಇದೆಲ್ಲಾ ಹುಚ್ಚಾಟ. ಇನ್ಮುಂದೆ ಕೆಟ್ಟ ನೆನಪುಗಳನ್ನು ಅಳಿಸೋ ಬದ್ಲು, ಅಂಥ ನೆನಪುಗಳು ಯಾರ ತಲೆಯಲ್ಲೂ ಹುಟ್ಟದೇ ಇರೋ ಹಾಗೆ ಮಾಡೋಣ ಅಷ್ಟೇ"
"ಯಾರ್ ಯಾರನ್ನಾ ಅಂತ ತಡೆಯೋದು? ಅವ್ರೇನು ನಾನು ರೇಪಿಸ್ಟ್ ಅಂತ ಹಣೆ ಮೇಲೆ ಬರ್ಕೊಂಡಿರ್ತಾರೇನೋ ಈಡಿಯಟ್?" ನಿಖಿಲ್ ದ್ವನಿ ಈಗ ನಡುಗುತ್ತಿತ್ತು.
"ನಿಖಿಲ್ ಐ ಯಾಮ್ ಈಕ್ವಲಿ ಶಾಕಡ್!"
"ಈಗೇನೋ ಮಾಡೋದು?" ನಿಖಿಲ್ ನೋವಿನಿಂದ ಕೇಳಿದ.
"ಐ ಥಿಂಕ್ ವಿ ಶುಡ್ ವರ್ಕ್ ಆನ್ ಕಲ್ಪ್ರಿಟ್; ನಾಟ್ ದಿ ವಿಕ್ಟಿಮ್" ಪ್ರಣವ್ ಗೋಡೆಗೆ ಗುದ್ದಿದ.
"ಅಷ್ಟು ವಯಸ್ಸಾಗಿರೋ ನಮ್ಮಪ್ಪನಿಗೆ ಏನೋ ಶಿಕ್ಷೆ ಕೊಡಲಿ?" ಸಿಟ್ಟಿನಿಂದ ಅವನ ದೇಹವೇ ಕಂಪಿಸುತ್ತಿತ್ತು.
ಪ್ರಣವ್ ಮತ್ತೆ ಎದ್ದು ಬಂದು ಅವನ ಪಕ್ಕದಲ್ಲಿ ಕುಳಿತು ಅಪ್ಪಿಕೊಂಡು, "ಸಮಾಧಾನ ಮಾಡ್ಕೊಳ್ಳೋ" ಎಂದ.
***

ಪ್ರಣವ್ ಮತ್ತು ನಿಖಿಲ್ ಇಬ್ಬರೂ ಕೆಳಗಿಳಿದು ಬಂದಾಗ ಮಕ್ಕಳು ಸೂರಿಯೊಂದಿಗೆ ಕ್ರಿಕೆಟ್ ಆಡುತ್ತಿದ್ದರು. ಹೊಡೆದಾಡಿಕೊಂಡು, ರಕ್ತಸಿಕ್ತರಾಗಿ, ದಣಿದು ಬಂದ ಅವರಿಬ್ಬರ ಸ್ಥಿತಿಯನ್ನು ನೋಡಿ ಗಿಡಗಳಿಗೆ ನೀರೂಡಿಸುತ್ತಿದ್ದ ಸೌಭಾಗ್ಯ ಬೆಚ್ಚಿ ಅವರಿದ್ದ ಕಡೆ ಓಡಿ ಬಂದಳು.

"ಏನಾಯ್ತು?" ನಿಖಿಲ್ ಎದುರಿಗೆ ನಿಂತು ರಕ್ತ ಸೋರುತ್ತಿದ್ದ ಅವನ ಕೆನ್ನೆಯನ್ನು ಮುಟ್ಟಿ ದುಗುಡದಿಂದ ಕೇಳಿದಳು. ನಿಖಿಲ್ ಅವಳ ಕಣ್ಣುಗಳಲ್ಲಿ ವರ್ಷಗಳಿಂದ ಹಿಡಿದಿಟ್ಟುಕೊಂಡಿದ್ದ ಪ್ರೀತಿ, ತುಂಬಿ ತುಳುಕುತ್ತಿರುವುದನ್ನು ನೋಡಿದನು. ಮೊದಲ ಬಾರಿಗೆ ಅವನಿಗೆ ಬಾಲ್ಯದ ಸೌಭಾಗ್ಯ ನೆನಪಾದಳು. ನಿನ್ನೆಯವರೆಗೂ ಇವಳು ಬೇರೆಯೇ ವ್ಯಕ್ತಿಯಾಗಿದ್ದಳೇನೋ ಎಂದು ಅಚ್ಚರಿಯಿಂದ, ಸಮಾಧಾನದಿಂದ ನೋಡಿದನು.

"ನಾನು ಚಿಕ್ಕವನಿದ್ದಾಗ, ಕೆರೇಲಿ ಬಿದ್ದಿದ್ನಲ್ಲ, ಆಗ ನಿಂಗೆ ಈಜೋಕೆ ಬರದೇ ಇದ್ರೂ ಯಾಕೆ ನೀರಿಗ್ ಬಿದ್ದೆ?" ಅವಳ ಭುಜದ ಮೇಲೆ ಕೈ ಇಟ್ಟು ಕೇಳಿದನು.

ಸೌಭಾಗ್ಯಳ ಮುಖ ಮತ್ತೆ ಗೊಂದಲದಿಂದ ಮಂಕಾಯಿತು. "ಹೌದಾ? ನಾನು ನೀರಿಗೆ ಬಿದ್ದಿದ್ದಾ?" ಎಂದು ಕೇಳಿದಳು!

ಈಗ ಪೆಚ್ಚಾಗುವ ಸರದಿ ನಿಖಿಲನದಾಗಿತ್ತು. "ಶಿಟ್, ಶಿ ರಿಗ್ರೆಟೆಡ್ ಸೇವಿಂಗ್ ಮಿ; ಶಿ ಡಿಲೀಟೆಡ್ ದಟ್ ಮೆಮೋರಿ ಟೂ!" ನಿಖಿಲ್ ಪ್ರಣವನ ಕಡೆ ನೋಡಿ ಬೇಸರದಿಂದ ಹೇಳಿದ.

ಅಷ್ಟರಲ್ಲಿ ಪದೇ ಪದೇ ಉದುರಿ ಬೀಳುತ್ತಿದ್ದ ಎಲೆಗಳಿಂದ ಬೇಸತ್ತು ಹೋಗಿದ್ದ ದೊಡ್ಡ ಮಗ, "ಅಪ್ಪ, ಈ ಎಲೆಗಳು ಎಷ್ಟು ಗುಡಿಸಿದ್ರು ಬೀಳ್ತಾನೆ ಇದಾವೆ. ವೈ ಡೋಂಟ್ ಯು ಜಸ್ಟ್ ಕಟ್ ದಿಸ್ ಡ್ಯಾಮ್ಡ್ ಟ್ರೀ" ಎಂದು ಬ್ಯಾಟ್ ಅನ್ನು ಎಸೆದು ಹೋಗಿ ಜಗುಲಿ ಮೇಲೆ ಕುಳಿತು ಬಿಟ್ಟ.

ನಿಖಿಲ್ ದುಃಖದಿಂದ ಒಮ್ಮೆ ಅವನ ಪ್ರೀತಿಯ ಮಾವಿನ ಮರವನ್ನೂ, ಮತ್ತೊಮ್ಮೆ ಅಪ್ಪನನ್ನೂ ನೋಡಿದ!

***

ಮೇಲಿನ ಕೋಣೆ ಮತ್ತೆ ಖಾಲಿಯಾಗಿತ್ತು. ಗೋಡೆಯ ಮೇಲೆ ಮತ್ತೆ ತೂಗಿ ಕೊಂಡ ನಿಲುವುಗನ್ನಡಿಯ ಮುಂದೆ ಮತ್ತೆ ಸೌಭಾಗ್ಯ ಬೆತ್ತಲಾಗಿ ನಿಂತು, ಎದೆಯ ಮೇಲಿನ ಗಾಯವನ್ನು ನೇವರಿಸಿಕೊಳ್ಳುತ್ತಾ, ಅದು ಹೇಗಾಯಿತೆಂದು ನೆನಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು! ಕನ್ನಡಿಯ ಪಕ್ಕ ತೂಗು ಹಾಕಿದ್ದ ನಿಖಿಲನ ಫೋಟೋವನ್ನು ಕೈಗೆತ್ತಿಕೊಂಡು, ನೆಲದ ಮೇಲೆ ಬಿದ್ದಿದ್ದ ತನ್ನ ಸೀರೆಯಿಂದ ಒರೆಸಿ, ಆಸೆಯಿಂದ ನೋಡುತ್ತಾ, ಎದೆಗೊತ್ತಿಕೊಂಡಳು!

~***~